www.divinegen.org
www.dgmbethelchurch.org

ದೇವರ ಸ್ವರ
ದೇವ ಜನರಿಂದ ... ದೇವ ಜನರಿಗಾಗಿ

ಸಂಪುಟ -10 ಸಂಚಿಕೆ - 4 ಎಪ್ರಿಲ್ 2014
Volume : X Issue : IV April 2014

Editor, Publisher, Printer
& Owned by :
**Sunil John D'souza**
S/o Sri Joseph D'souza
Bethel Faith Home
Yesupura, Innanje Village,
Shankarpura, **Udupi**


Printed at :
**Prakash Offset Printers,**
Plot No. 164, Industrial Area,
Baikampady,
**Mangalore - 575003.**

Published at :
**Divine Generation Ministries**
Bethel Church Trust,
Bethel Church Road,
Yesupura, Innanje Village,
Shankarpura Post,
Udupi - 574 115.

ಒಳ ಪುಟಗಳಲ್ಲಿ

1. ಪ್ರಕಟಣೆ
2. ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ
3. ವಯಸ್ಕರ ಸ್ವರ
4. ಆರೋಗ್ಯ ಸ್ವರ
5. ಸಾಕ್ಷಿಯ ಸ್ವರ
6. ನೀತಿವಂತನ ಆಶೀರ್ವಾದಗಳು
7. ಪ್ರಾರ್ಥನಾ ಸ್ವರ
8. ಮಹಿಳೆಯರ ಸ್ವರ
9. ಸ್ಥಳೀಯ ವಿದೇಶಿ ಸುದ್ಧಿಗಳು
10. ಮಕ್ಕಳ ಸ್ವರ

# ಸಂಪಾದಕರ ಲೇಖನಿಯಿಂದ . . .



ಕರ್ತನಾದ ಯೇಸುಕ್ತಿಸ್ತನ ಪರಿಶುದ್ಧವಾದ ನಾಮದಲ್ಲಿ ಪ್ರಿಯ ಸಹೋ/ಸಹೋದರಿಯರೆಲ್ಲರಿಗೂ ನನ್ನ ವಂದನೆಗಳು.

ಕರ್ತನಾದ ಯೇಸುಕ್ರಿಸ್ತನು ನಮ್ಮೆಲ್ಲರಿಗೂ ಒಳ್ಳೆಯವನಾಗಿದ್ದಾನೆ, ಒಳ್ಳೆದ್ದನ್ನೇ ಮಾಡಿಕೊಂಡು ನಡೆಸುತ್ತಾ ಇದ್ದಾನೆ ಅದಕ್ಕಾಗಿ ಆತನಿಗೆ ಸ್ತೋತ್ರ ಸಲ್ಲಿಸುತ್ತೇನೆ. ನಿಮ್ಮೊಂದಿಗೆ ಒಂದು ಮುಖ್ಯ ವಿಚಾರವನ್ನು ಹಂಚಲು ಬಯಸುತ್ತೇನೆ. ಅನೇಕ ಕ್ರೈಸ್ತರಲ್ಲಿ ಸುವಾರ್ತ ಸೇವೆಯ ಭಾರವು ತಣ್ಣಗಾಗಿ ಹೋದಂತಹ ಪರಿಸ್ಥಿತಿಯಲ್ಲಿದೆ. ಕರ್ತನಾದ ಯೇಸುಕ್ರಿಸ್ತನು ಸ್ವರ್ಗಾರೋಹಣವಾಗುವಂತಹ ಸಂದರ್ಭದಲ್ಲಿ **"ಆಗ ಯೇಸು ಹತ್ತರಕ್ಕೆ ಬಂದು ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ.** (ಮತ್ತಾ. 28:18–20) ವಾಕ್ಯದ ಪ್ರಕಾರವಾಗಿ ಸುವಾರ್ತಾ ಸೇವೆಯ ಒಂದು ಜವಾಬ್ದಾರಿಯನ್ನು ಆತನು ಸಭೆಗೆ ವಹಿಸಿಕೊಟ್ಟು ಪರಲೋಕಕ್ಕೆ ಏರಿಹೋಗಿದ್ದಾನೆ. ಇಂದು ನಮ್ಮ ಜವಾಬ್ದಾರಿಯನ್ನು ಎಷ್ಟರ ಮಟ್ಟಿಗೆ ಮಾಡುತ್ತಾ ಇದ್ದೇವೆ? ಸುವಾರ್ತ ಸೇವೆಯು ವೈಯಕ್ತಿಕವಾಗಿ ವ್ಯಕ್ತಿಗಳನ್ನು ಸಂದರ್ಶಿಸುವುದರ ಮೂಲಕವಾಗಿಯಾಗಲಿ, ಮನೆಯನ್ನು ಸಂದರ್ಶಿಸುವುದರ ಮೂಲಕವಾಗಿಯಾಗಲಿ, ಆಸ್ಪತ್ರೆ ಸಂದರ್ಶನದ ಮೂಲಕವಾಗಿಯಾಗಲಿ, ಬಂಧಿಖಾನೆ ಸಂದರ್ಶನದ ಮೂಲಕವಾಗಿಯಾಗಲಿ, ಆಶ್ರಮ ಸಂದರ್ಶನದ ಮೂಲಕವಾಗಿಯಾಗಲಿ, ಸುವಾರ್ತ ಕೂಟಗಳನ್ನು ನಡೆಸುವುದರ ಮೂಲಕವಾಗಿಯಾಗಲಿ, ಕರಪತ್ರಗಳನ್ನು ಹಂಚುವುದರ ಮೂಲಕವಾಗಿಯಾಗಲಿ, ವಿವಿಧ ಆತ್ಮೀಕ ಪುಸ್ತಕ್ತಗಳನ್ನು ವಿತರಿಸುವುದರ ಮೂಲಕವಾಗಿಯಾಗಲಿ ಅಥವಾ ಮಾಸಿಕ ಪತ್ರಿಕೆಗಳ ಮೂಲಕವಾಗಿಯಾಗಲಿ, ಈ ಯಾವುದೇ ವಿಧಗಳ ಮೂಲಕ ನಡೆಸಬಹುದು. ಸಾಧ್ಯವಾದ್ದಲ್ಲಿ ನಿಮ್ಮ ಸ್ನೇಹಿತರ, ಸಂಬಂಧಿಕರ, ನೆರೆಕೆರೆಯವರ ವಿಳಾಸವನ್ನು ಕಳುಹಿಸಿ ಅವರ ವಾರ್ಷಿಕ ಚಂದಾ ಹಣವನ್ನು ನೀವೇ ಭರಿಸಿ ಅವರ ಮನೆಗಳಿಗೆ ಪ್ರತಿ ತಿಂಗಳು ದೇವರ ಸ್ವರ ಮಾಸ ಪತ್ರಿಕೆಯು ತಲುಪುವ ಹಾಗೆ ಮಾಡಿದರೆ ಅದನ್ನು ಓದುವುದರ ಮೂಲಕ ಹೊಂದು ರಕ್ಷಣೆ, ಜೀವಿತದಲ್ಲಿ ಆಗುವ ಬದಲಾವಣೆ, ಆತ್ಮೀಕ ಪ್ರಯೋಜನ, ವಿವಿಧ ರೀತಿಯ ಬಿಡುಗಡೆ ಇದೆಲ್ಲದ್ದರ ಪ್ರತಿಫಲವನ್ನು ತಾವು ಪರಲೋಕದಲ್ಲಿ ಹೊಂದುವೀರಿ. ಆದಕಾರಣ ತಡಮಾಡದೆ ಈ ಒಳ್ಳೇ ಕಾರ್ಯಕ್ಕೆ ಮುಂದಕ್ಕೆ ಹೆಜ್ಜೆ ಇಡಬೇಕಾಗಿ ತಮ್ಮಲ್ಲಿ ಕಳಕಳಿಯಿಂದ ವಿನಂತಿಸುತ್ತೇನೆ.

ವಂದನೆಗಳೊಂದಿಗೆ,

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಂಪಾದಕರು

# ಪ್ರಕಟಣೆ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

**"ಲೇವಿಯ ಮರಿಮಗನೂ ಕೆಹಾತನ ಮೊಮ್ಮಗನೂ ಇಚ್ಹಾರನ ಮಗನೂ ಆದ ಕೋರಹನೂ ಅವನಲ್ಲದೆ ರೂಬೇನ್ ಕುಲದವರಲ್ಲಿ ಎಲೀಯಾಬನ ಮಕ್ಕಳಾದ ದಾತಾನ್ ಅಬೀರಾಮರೂ ಪೆಲೆತನ ಮಗನಾದ ಓನನೂ ಮತ್ತು ಸಮೂಹದವರಲ್ಲಿ ಮುಖ್ಯಸ್ಥರಾಗಿಯೂ ಅಲೋಚನಾ ಕರ್ತರಾಗಿಯೂ ಹೆಸರುಗೊಂಡವರಾಗಿಯೂ ಇದ್ದ ಇನ್ನೂರೈವತ್ತು ಮಂದಿ ಇಸ್ರಾಯೇಲ್ಯರೂ ಮೋಶೆಗೆ ವಿರೋಧವಾಗಿ ತಿರುಗಿಬಿದ್ದರು. ಅವರು ಒಟ್ಟಾಗಿ ಕೂಡಿಕೊಂಡು ಮೋಶೆ ಆರೋನರ ಬಳಿಗೆ ಬಂದು ಅವರಿಗೆ ನಿಮ್ಮಿಂದ ಸಾಕಾಯಿತು. ಈ ಸಮೂಹದವರಲ್ಲಿ ಪ್ರತಿಯೊಬ್ಬನೂ ದೇವರಿಗೆ ಪ್ರತಿಷ್ಠಿತನೇ; ಯೆಹೋವನು ಇವರೆಲ್ಲರ ಮಧ್ಯದಲ್ಲಿ ಇದ್ದಾನಲ್ಲವೇ; ಹೀಗಿರಲಾಗಿ ಯೆಹೋವನ ಸಮೂಹದವರಿಗಿಂತಲೂ ನಿಮ್ಮನ್ನು ನೀವೇ ಹೆಚ್ಚಿಸಿಕೊಳ್ಳುವದೇನು ಎಂದು ಹೇಳಿದರು. ಮೋಶೆ ಆ ಮಾತನ್ನು ಕೇಳಿ ಅಡ್ಡಬಿದ್ದು ಕೋರಹನಿಗೂ ಅವನ ಎಲ್ಲಾ ಸಮೂಹದವರಿಗೂ ತನ್ನವರು ಯಾರಾರೆಂಬದನ್ನು ಯೆಹೋವನು ನಾಳೆ ತಿಳಿಸುವನು. ಯಾರನ್ನು ಯೆಹೋವನು ಪ್ರತಿಷ್ಠಿಸಿದ್ದಾನೋ ಯಾರನ್ನು ತಾನೇ ಆದುಕೊಂಡಿದ್ದಾನೋ ಅವರನ್ನು ಮಾತ್ರ ಆತನು ತನ್ನ ಹತ್ತಿರಕ್ಕೆ ಬರಗೊಡಿಸುವನು."** (ಅರಣ್ಯ. 16:1). ಅನೇಕ ಸಲ ಸಭೆಯಲ್ಲಿ ಕೆಲವರಿಗೆ ಜವಾಬ್ದಾರಿಗಳು ಕೊಡಲ್ಪಟ್ಟಿರುತ್ತವೆ ಆದರೆ ಲೂಸಿಫರನನ್ನು ಹಿಡಿದ ಅದೇ ಹೆಮ್ಮೆ, ಅದೇ ಗರ್ವ ಅವರನ್ನು ಹಿಡಿದು ತಮ್ಮ ಮೇಲೆ ಕರ್ತನು ನೇಮಕ ಮಾಡಿರುವ ಸೇವಕರನ್ನು ಹೊಡಿಸಲು ಮತ್ತು ಸಮಸ್ಯೆಗಳನ್ನುಂಟು ಮಾಡಲು ಅವರು ಆರಂಭಿಸುತ್ತಾರೆ. ಇದು ಅವರ ಅವನತಿಗೆ ಕಾರಣವಾಗುತ್ತದೆ. ಸಭಾಪಾಲಕರನ್ನು ಕರ್ತನೇ ನೇಮಕ ಮಾಡಿರುತ್ತಾನೆಂಬುದನ್ನು ನಾವು ಮರೆಯಬಾರದು. **"ಯಾವನೂ ತನ್ನಷ್ಟಕ್ಕೆ ತಾನೇ ಈ ಗೌರವವನ್ನು ವಹಿಸಿಕೊಳ್ಳದೆ ದೇವರಿಂದ ನೇಮಿಸಲ್ಪಟ್ಟು ವಹಿಸಿಕೊಳ್ಳುತ್ತಾನೆ; ಆರೋನನು ಸಹ ದೇವರಿಂದಲೇ ನೇಮಿಸಲ್ಪಟ್ಟು ಆ ಗೌರವವನ್ನು ವಹಿಸಿಕೊಂಡನಲ್ಲಾ"** (ಇಬ್ರಿ. 5:4). ದೇವರು ಯಾರನ್ನು ಯಾವ ಸೇವೆಗಾಗಿ ಕರೆದಿದ್ದಾನೆ ಅದನ್ನು ಖಚಿತಪಡಿಸಿಕೊಂಡು ಮಾಡಿದರೆ ಆಶೀರ್ವಾದ. ಸಭೆಯಲ್ಲಿ ಮಾಡಲು ಅನೇಕ ಸೇವೆಗಳಿವೆ. ಸಭೆಯನ್ನು ಶರೀರಕ್ಕೆ ಹೋಲಿಸಲಾಗಿದೆ. ಶರೀರದ ಅವಯವಗಳು ಒಂದಕ್ಕೊಂದು ಹೊಂದಿಕೆಯಾಗಿ ತಮ್ಮ ತಮ್ಮ ಕೆಲಸವನ್ನು ಮಾಡುತ್ತವೆಯೋ ಅದೇ ಪ್ರಕಾರ ನಾವು ಅನೇಕ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. **"ನೀನೂ ನಿನ್ನ ಸಂತತಿಯವರೂ ಯಾಜಕೋದ್ಯೋಗವನ್ನು ಕೈಕೊಂಡವರಾಗಿ ಯಜ್ಞವೇದಿಯ ಮತ್ತು ತೆರೆಯೊಳಗಣ ಕಾರ್ಯಗಳನ್ನು ನಡಿಸಬೇಕು; ಅವುಗಳ ಪರಿಚರ್ಯವನ್ನು ನೀವೇ ಮಾಡಬೇಕು; ನಾನು ಯಾಜಕತ್ವವನ್ನು ನಿಮಗೇ ಅನುಗ್ರಹಿಸಿದ್ದೇನೆ; ಇತರರು ಅದಕ್ಕೆ ಕೈಹಾಕಿದರೆ ಅವರಿಗೆ ಮರಣಶಿಕ್ಷೆಯಾಗಬೇಕು"** (ಅರಣ್ಯ. 18:7). **"ಉಜ್ಜೀಯನು ಈ ಎಲ್ಲಾ ಸೈನ್ಯದವರಿಗೋಸ್ಕರ ಬೇಕಾದ ಗುರಾಣಿ ಬರ್ಜಿ ಶಿರಸ್ತ್ರಾಣ ಕವಚ ಬಿಲ್ಲು ಕವಣೆಯಕಲ್ಲು ಇವುಗಳನ್ನು ಒದಗಿಸಿಕೊಟ್ಟನು. ಇದಲ್ಲದೆ ಅವನು ಬಾಣಗಳನ್ನೂ ದೊಡ್ಡ ಕಲ್ಲುಗಳನ್ನೂ ಎಸೆಯುವದಕ್ಕಾಗಿ ಜಾಣರ ಕಲ್ಪನೆಯ ಮೇರೆಗೆ ಯಂತ್ರಗಳನ್ನು ಮಾಡಿಸಿ ಅವುಗಳನ್ನು ಯೆರೂಸಲೇಮಿನಲ್ಲಿ ಬುರುಜುಗಳ ಮೇಲೆಯೂ ಆಳುವೇರಿಗಳ ಮೇಲೆಯೂ ಇಡಿಸಿದನು. ಅವನು ಬಲಿಷ್ಠನಾಗುವವರೆಗೂ ದೇವರ ಆಶ್ಚರ್ಯವಾದ ಸಹಾಯವನ್ನು ಹೊಂದಿದನು; ಅವನ ಕೀರ್ತಿಯು ದೂರದವರೆಗೆ ಹಬ್ಬಿತು. ಆದರೆ ಅವನು ಬಲಿಷ್ಠನಾದ ಮೇಲೆ ಗರ್ವಿಷ್ಟನಾಗಿ ಭ್ರಷ್ಟನಾದನು; ತನ್ನ ದೇವರಾದ ಯೆಹೋವನಿಗೆ ದ್ರೋಹಿಯಾಗಿ ಧೂಪವೇದಿಯ ಮೇಲೆ ತಾನೇ ಧೂಪಹಾಕಬೇಕೆಂದು ಯೆಹೋವನ ಆಲಯದೊಳಕ್ಕೆ ಹೋದನು. ಆಗ ಮಹಾಯಾಜಕನಾದ ಅಜರ್ಯನೂ ಧೈರ್ಯಶಾಲಿಗಳಾದ ಎಂಭತ್ತು ಮಂದಿ ಇತರ ಯಾಜಕರೂ ಅರಸನಾದ ಉಜ್ಜೀಯನ ಹಿಂದೆಯೇ ಹೋಗಿ ಅವನೆದುರಿಗೆ ನಿಂತು ಅವನಿಗೆ ಉಜ್ಜೀಯನೇ, ಯೆಹೋವನಿಗೋಸ್ಕರ ಧೂಪಹಾಕುವದು ನಿನ್ನ ಕೆಲಸವಲ್ಲ; ಅದಕ್ಕೋಸ್ಕರ ಆರೋನನ ಸಂತಾನದವರಾದ ಯಾಜಕರು ಪ್ರತಿಷ್ಠಿತರಾಗಿದ್ದಾರೆ. ಪವಿತ್ರಾಲಯವನ್ನು ಬಿಟ್ಟುಹೋಗು; ನೀನು ದ್ರೋಹಿ. ಇದಕ್ಕಾಗಿ ದೇವರಾದ ಯೆಹೋವನಿಂದ ನಿನಗೆ ಮಾನವುಂಟಾಗಲಾರದು. ಅನ್ನಲು ಧೂಪಹಾಕಬೇಕೆಂದು ಕೈಯಲ್ಲಿ ಧೂಪಾರತಿಯನ್ನು ಹಿಡಿದಿದ್ದ ಉಜ್ಜೀಯನು ಕೋಪವುಳ್ಳವನಾದನು. ಅವನು ಯೆಹೋವನ ಆಲಯದ ಧೂಪವೇದಿಯ ಬಳಿಯಲ್ಲಿ ನಿಂತು ಯಾಜಕರೊಡನೆ ಸಿಟ್ಟಿನಿಂದ ಮಾತಾಡುತ್ತಿರುವಾಗ ಯಾಜಕರ ಸಮುಕ್ಷದಲ್ಲೇ ಅವನ ಹಣೆಯಲ್ಲಿ ಕುಷ್ಠಹುಟ್ಟಿತು.**

**ಯೆಹೋವನು ನಿಮ್ಮನ್ನೂ ನಿಮ್ಮ ಮಕ್ಕಳನ್ನೂ ಅಭಿವೃದ್ಧಿಪಡಿಸಲಿ**

**(ಕೀರ್ತ. 115:14).**

**ಮಹಾಯಾಜಕನಾದ ಅಜರ್ಯನೂ ಎಲ್ಲಾ ಯಾಜಕರೂ ಅವನನ್ನು ದೃಷ್ಟಿಸಿ ನೋಡಿದಾಗ ಅವನ ಹಣೆಯಲ್ಲಿ ಕುಷ್ಟವು ಕಂಡುಬಂದ ಕಾರಣ ಅವನನ್ನು ಶೀಘ್ರವಾಗಿ ಅಲ್ಲಿಂದ ಹೊರಡಿಸಿದರು. ಯೆಹೋವನು ತನ್ನನ್ನು ಬಾಧಿಸಿದ್ದಾನೆಂದು ಅವನಿಗೆ ತಿಳಿದದರಿಂದ ಅವನೂ ಶೀಘ್ರವಾಗಿ ಹೊರಗೆ ಹೋದನು. ಉಜ್ಜೀಯನು ಜೀವದಿಂದಿರುವ ವರೆಗೂ ಕುಷ್ಠರೋಗಿಯಾಗಿದ್ದು ಯೆಹೋವನ ಆಲಯಕ್ಕೆ ಬಾರದಂತೆ ಬಹಿಷ್ಕೃತನಾದನು. ಅವನು ಕುಷ್ಠದ ದೆಸೆಯಿಂದ ಪ್ರತ್ಯೇಕವಾದ ಮನೆಯಲ್ಲಿ ವಾಸಿಸಬೇಕಾಯಿತು. ರಾಜಗೃಹಾಧಿಪತ್ಯವನ್ನೂ ಪ್ರಜಾಪಾಲನೆಯನ್ನೂ ಅವನ ಮಗನಾದ ಯೋತಾಮನು ನೋಡಿಕೊಳ್ಳುತ್ತಿದ್ದನು. ಉಜ್ಜೀಯನ ಉಳಿದ ಪೂರ್ವೋತ್ತರ ಚರಿತ್ರೆಯನ್ನು ಆಮೋಚನ ಮಗನಾದ ಯೆಶಾಯನೆಂಬ ಪ್ರವಾದಿಯು ಬರೆದಿದ್ದಾನೆ. ಉಜ್ಜೀಯನೂ ಪಿತೃಗಳ ಬಳಿಗೆ ಸೇರಲು ಅವನ ಶವವನ್ನು ಕುಷ್ಠರೋಗಿಯುದೆಂದು ರಾಜಕುಟುಂಬ ಶ್ಮಶಾನವಿದ್ದ ಹೊಲದಲ್ಲಿ ಸಮಾಧಿಮಾಡಿದರು. ಅವನಿಗೆ ಬದಲಾಗಿ ಅವನ ಮಗನಾದ ಯೋತಾಮನು ಅರಸನಾದನು"** (2 ಪೂರ್ವ. 26:14:23). ಮೋಶೆ ಹೀಗೆ ಹೇಳಿದನು ನೀವೆಲ್ಲರೂ ಅಂದರೆ ಕೋರಹನೂ ಅವನ ಸಮೂಹದವರೆಲ್ಲರೂ ದೂಫಾರತಿಗಳನ್ನು ತೆಗೆದುಕೊಂಡು ಅವುಗಳಲ್ಲಿ ಕೆಂಡಗಳನ್ನಿಟ್ಟು ನಾಳೆ ಯೆಹೋವನ ಸನ್ನಿಧಿಯಲ್ಲಿ ದೂಫ ಹಾಕಿರಿ ಆಗ ಯೆಹೋವನು ಯಾರನ್ನು ಮೆಚ್ಚುವನೋ ಅವನೇ ದೇವರಿಗೆ ಪ್ರತಿಷ್ಠಿತನೆಂದು ತಿಳುಕೊಳ್ಳುವಿರಿ. ಲೇವಿಯರೇ, ನಿಮ್ಮಿಂದ ಸಾಕಾಯಿತು ಎಂದು ಹೇಳಿದನು (ಅರಣ್ಯ. 16:6–7). ಧೂಪ ಹಾಕುವಂತಹ ಕೆಲಸ ಯಾಜಕರದ್ದಾಗಿತ್ತು. ಅದನ್ನು ಆರೋನನ ವಂಶದವರೇ ಮಾಡಬೇಕಾಗಿತ್ತು. ಲೇವಿಯರ ಕೆಲಸ (ಸೇವೆ) **"ಯೆಹೋವನು ಮೋಶೆಗೆ ಆಜ್ಞಾಪಿಸಿದ್ದೇನಂದರೆ ನೀನು ಲೇವಿ ಕುಲದವರನ್ನು ಹತ್ತಿರಕ್ಕೆ ಕರೆದು ಅವರು** [ದೇವರ ಸೇವಾಕಾರ್ಯಕ್ಕಾಗಿ] **ಯಾಜಕನಾದ ಆರೋನನ ಕೈಕೆಳಗಿರುವಂತೆ ಅವನ ಮುಂದೆ ನಿಲ್ಲಿಸು. ಅವರು ದೇವದರ್ಶನದ ಗುಡಾರದ ಬಳಿಯಲ್ಲಿದ್ದು ಆರೋನನಿಗೋಸ್ಕರವೂ ಸರ್ವಸಮೂಹದವರಿ ಗೋಸ್ಕರವೂ ದೇವಸ್ಥಾನದ ಪರಿಚರ್ಯವನ್ನು ನಡಿಸಬೇಕು. ಅವರು ದೇವದರ್ಶನದ ಗುಡಾರದ ಸಾಮಾನುಗಳನ್ನು ಕಾಯಬೇಕು; ಇಸ್ರಾಯೇಲ್ಯರಿಗೋಸ್ಕರ ದೇವಸ್ಥಾನದ ಪರಿಚರ್ಯವನ್ನು ನಡಿಸಬೇಕು. ನೀನು ಲೇವಿಯರನ್ನು ಆರೋನನಿಗೂ ಅವನ ಮಕ್ಕಳಿಗೂ ಒಪ್ಪಿಸಬೇಕು; ಇಸ್ರಾಯೇಲ್ಯರಲ್ಲಿ ಆರೋನನಿಗೆ ಸಂಪೂರ್ಣವಾಗಿ ವಶಮಾಡಲ್ಪಟ್ಟವರು ಇವರೇ. ಯಾಜಕೋದ್ಯೋಗವನ್ನು ನಡಿಸುವದಕ್ಕೆ ಆರೋನನನ್ನೂ ಅವನ ಮಕ್ಕಳನ್ನೂ ನೇಮಿಸಬೇಕು. ಇತರನು ಆ ಕೆಲಸಕ್ಕೆ ಕೈಹಾಕಿದರೆ ಅವನಿಗೆ ಮರಣಶಿಕ್ಷೆಯಾಗಬೇಕು".** (ಅರಣ್ಯ. 3:5–10). ಈಗ ಮೋಶೆಯು ಅರಣ್ಯ. 16:12–15 ರಲ್ಲಿ **"ಮೋಶೆಯು ಎಲೀಯಾಬನ ಮಕ್ಕಳಾದ ದಾತಾನ್ ಅಬೀರಾಮರನ್ನು ಕರೇಕಳುಹಿಸಲಾಗಿ ಅವರು ಅವನಿಗೆ ನಾವು ಬರುವದಿಲ್ಲ, ನೀನು ಹಾಲೂ ಜೇನೂ ಹರಿಯುವ ದೇಶದಿಂದ ನಮ್ಮನ್ನು ಕರಕೊಂಡು ಬಂದು ಮರಳುಕಾಡಿನಲ್ಲಿ ಸಾಯಿಸುವದು ಅಲ್ಪಕಾರ್ಯವೆಂದು ಎಣಿಸಿ ನಮ್ಮ ಮೇಲೆ ದೊರೆತನ ಮಾಡಬೇಕೆಂದು ಕೋರುತ್ತೀಯೋ? ಅಷ್ಟು ಮಾತ್ರವೇ ಅಲ್ಲ, ಹಾಲೂ ಜೇನೂ ಹರಿಯುವ ದೇಶಕ್ಕೆ ನಮ್ಮನ್ನು ಸೇರಿಸಲಿಲ್ಲವಲ್ಲಾ; ಹೊಲಗಳನ್ನೂ ದ್ರಾಕ್ಷೇತೋಟಗಳನ್ನೂ ನಮಗೆ ಸ್ವಂತಕ್ಕೆ ಕೊಡಲೇ ಇಲ್ಲ; ಈ ಜನರ ಕಣ್ಣಿಗೆ ಮಣ್ಣು ಹಾಕಬೇಕೆಂದಿದ್ದೀಯೋ? ನಾವು ಬರುವದಿಲ್ಲ ಎಂದು ಹೇಳಿದರು. ಅದಕ್ಕೆ ಮೋಶೆ ಬಹು ಕೋಪಗೊಂಡು ಯೆಹೋವನಿಗೆ ನೀನು ಅವರ ನೈವೇದ್ಯವನ್ನು ಲಕ್ಷ್ಯಕ್ಕೆ ತೆಗೆದುಕೊಳ್ಳಬೇಡ; ನಾನು ಅವರಿಂದ ಒಂದು ಕತ್ತೆಯನ್ನಾದರೂ ತೆಗೆದುಕೊಂಡವನಲ್ಲ; ಅವರಲ್ಲಿ ಒಬ್ಬನಿಗಾದರೂ ಹಾನಿ ಮಾಡಿದವನಲ್ಲ ಎಂದು ಮನವಿಮಾಡಿದನು.**

ಮುಂದುವರಿಯುವದು.......

**ಪಾಸ್ಟರ್ ಸುನಿಲ್ ಜಾನ್ ಡಿ'ಸೋಜಾ**
ಹಿರಿಯ ಸಭಾಪಾಲಕರು, ಬೇತೇಲ್ ಚರ್ಚ್.

**ದಯಮಾಡಿ ನಿಮ್ಮ ಗಮನಕ್ಕೆ:** ವಿಶ್ವಾಸದ ಮನೆಯು ಕೇವಲ ರಸ್ತೆಯಲ್ಲಿರುವ ಅನಾಥರು ಹಾಗೂ ನಿರ್ಗತಿಕರಿಗೆ ಮಾತ್ರ ಮೀಸಲಾಗಿದೆ. ವಿನಹ ಮನೆಯವರಿಗಲ್ಲ. ದಯಮಾಡಿ ಯಾರ ಪ್ರಭಾವ ಅಥವಾ ಒತ್ತಡವನ್ನು ವಿಶ್ವಾಸದ ಮನೆಯ ಆಡಳಿತ ಮಂಡಳಿಗಾಗಲಿ ಅಥವಾ ಇನ್ನ್ಯಾವ ಸಭೆಯವರಿಗಾಗಲಿ, ಸೇವಕರಿಗಾಗಲಿ ಮಾಡಬಾರದೆಂದು ಈ ಮೂಲಕ ನಮ್ಮ ಎಲ್ಲಾ ಓದುಗರಿಗೂ ಮತ್ತು ಹಿತೈಷಿಗಳಿಗೂ ನಮ್ರತೆಯಿಂದ ಕೇಳಿಕೊಳ್ಳುತ್ತೇವೆ.

**– ಸಂಪಾದಕರು, ದೇವರ ಸ್ವರ.**

**ಸ್ಥಿರಚಿತ್ತನನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ.**

**(ಯೆಶಾ. 26:3).**

# ಕ್ರಿಸ್ತನ ಪ್ರಕಾಶವನ್ನು ಹೊಂದಿಕೋ

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

ಕರ್ತನಾದ ಯೇಸುಕ್ರಿಸ್ತನ ಸುಮಧುರವಾದ ನಾಮದಲ್ಲಿ ನಿಮ್ಮೆಲ್ಲರಿಗೂ ವಂದನೆಗಳು.

**"ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದೀರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. ಬೆಳಕಿನವರಂತೆ ನಡೆದುಕೊಳ್ಳಿರಿ. ಬೆಳಕಿನ ಫಲವು ಉಪಕಾರದಲ್ಲಿಯೂ ನೀತಿಯಲ್ಲಿಯೂ ಸತ್ಯದಲ್ಲಿಯೂ ಕಾಣಿಸಿಕೊಳ್ಳುತ್ತದೆ"** (ಎಫೆ. 5:8–9).

ಕ್ರಿಸ್ತನಲ್ಲಿ ಪ್ರಿಯರೇ, ಒಂದು ಸಮಯವಾಗಿತ್ತು ನಾವು ಕತ್ತಲೆಯಲ್ಲಿ ನಡೆಯುತ್ತಿದ್ದೇವು, ಆಗ ನಾವು ಏನು ಮಾಡುತ್ತಿದ್ದೇವೋ? ಎಲ್ಲಿಗೆ ಹೋಗುತ್ತಿದ್ದೇವೋ? ಯಾವ ದಾರಿಯಲ್ಲಿದ್ದೇವೊ ಎಂಬ ಪರಿವೆ ನಮಗಿರಲಿಲ್ಲ. ನಾವು ಮಾಡುತ್ತಿರುವುದು ನಮ್ಮ ಸ್ವಂತ ದೃಷ್ಟಿಗೆ ಸರಿಯಾಗಿತ್ತು. ನಾವೆಲ್ಲರೂ ಪೂರ್ವದಲ್ಲಿ ಅವಿಧೇಯರಾಗಿದ್ದು, ಶರೀರಭಾವದ ಆಶೆಗಳಿಗೆ ಅಧೀನರಾಗಿ ಶರೀರಕ್ಕೂ ಮನಸ್ಸಿಗೂ ಸಂಬಂಧಪಟ್ಟ ಇಚ್ಛೆಗಳನ್ನು ನೆರವೇರಿಸುತ್ತಾ ನಡೆದು ಮಿಕ್ಕಾದವರಂತೆ ಸ್ವಭಾವ ಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿದ್ದೇವು. ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ). (ಎಫೆ 2:3–5)

ಈಗ ನಾವು ಕ್ರಿಸ್ತನಲ್ಲಿ ಬೆಳಕಾಗಿದ್ದೇವೆ. **"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು"** (ಯೋಹಾ. 8:12). ಆದುದರಿಂದ ಕ್ರಿಸ್ತನ ಬೆಳಕಾಗಿ ಈ ಲೋಕದಲ್ಲಿ ನಾವು ಜೀವಿಸಬೇಕು.

ಅಪೋಸ್ತಲನಾದ ಪೌಲನು ಮೂರು ವರುಷ ಎಫೆಸದಲ್ಲಿ ಸೇವೆಮಾಡಿದ ನಿಮಿತ್ತ ಅನೇಕ ಅದ್ಭುತಕಾರ್ಯಗಳು ನಡೆದವು. ಅನೇಕರು ದೇವರಿಗೆ ವಿರುದ್ಧವಾದ ಸಂಗತಿಗಳನ್ನು ತಂದು ಸುಟ್ಟು ಹಾಕಿದರು ಅಲ್ಲಿ ಅನೇಕರು ರಕ್ಷಿಸಲ್ಪಟ್ಟು ದೇವರ ಕೃಪೆಯಿಂದ ತುಂಬಲ್ಪಟ್ಟರು. ಒಂದು ಭಕ್ತಿ ಸಂಜೀವನವೇ ಉಂಟಾಯಿತು. ನಂತರವಾಗಿ ಅಪೋಸ್ತಲನಾದ ಪೌಲನು ಸುವಾರ್ತ ಸೇವೆಯ ನಿಮಿತ್ತವಾಗಿ ಸೆರೆಯಲ್ಲಿದ್ದಾಗ ಕ್ರಿಸ್ತನ ಮೂಲಕವಾಗಿ ತಾನು ಬೆಳೆಸಿದ ಎಫೆಸ ಸಭೆಯ ಬಗ್ಗೆ ತಿಳಿದಾಗ ಅಲ್ಲಿನ ದೇವರ ಜನರ ಸ್ಥಿತಿಯು ತುಂಬಾ ಶೋಚನಿಯವಾಗಿತ್ತು. ಬಹಳಷ್ಟು ಕೃಪೆ ಹೊಂದಿದ ಸಭೆ ಪ್ರೀತಿಯಲ್ಲಿ ಮುಗ್ಗರಿಸಿ ಕತ್ತಲೆಯಲ್ಲಿ ಜೀವಿಸುತ್ತಿದ್ದಾರೆ ಎಂಬ ಮಾಹಿತಿ ತನಗೆ ಲಭ್ಯವಾದಗ ಇವರು ವಿಶ್ವಾಸಿಗಳಾ! ಅನ್ಯಜನರಾ ಎಂಬ ಪ್ರಶ್ನೆಯೇ? ಎಫೆಸದವರಿಗೆ ಎಚ್ಚರಿಸಿ ಪತ್ರಿಕೆ ಬರೆಯುವುದಕ್ಕೆ ಎಡೆಯಾಯಿತು. ಎಫೆಸ ಸಭೆಯ ವಿಶ್ವಾಸಿಗಳ ಜೀವನ ಕುಡಿಕರ ಜೀವನದಂತೆ ಮಾರ್ಪಟಿತ್ತು ಅದಕ್ಕೆ **"ಮದ್ಯಪಾನ ಮಾಡಿ ಮತ್ತರಾಗಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ"** ಎಂಬುದಾಗಿ ಎಚ್ಚರಿಸಿದ್ದನ್ನು ಕಾಣಬಹುದು. ಇದೇ ವಾಕ್ಯ ಹಿಡಿದು ಒಬ್ಬ ಅವಿಶ್ವಾಸಿ ನನ್ನೊಂದಿಗೆ ಬಹಳ ತರ್ಕ ಮಾಡಿದರು. ನಾವು ಕುಡಿಯಬಹುದು ಆದರೆ ಜಾಸ್ತಿ ಕುಡಿಯಬಾರದು ನಾನು ಲಿಮಿಟಲ್ಲಿ ಕುಡಿಯುತ್ತೇನೆ ನನಗೆ ಸ್ವಾಧೀನ ಇದೆ. ಜಾಸ್ತಿ ಕುಡಿದರೆ ಪಟಿಂಗತನ ಬರುತ್ತದೆ ಎಂದು ನನಗೆ ಹೇಳಿದರು. ನಾನು ಅವರಿಗೆ ಹೇಳಿದೆ ಆ ವಾಕ್ಯದ ಸಾಂದರ್ಭಿಕರಣ ನೋಡಿ ಅಲ್ಲಿ ಪೌಲನು ಹೇಳಿದ ಮಾತಿನ ಅರ್ಥ ದೇವಜನರ ಜೀವಿತವು ಕುಡಿಕರಿಗೆ ಸರಿಸಮಾನವಾಗಿದೆ ಅಷ್ಟೆ. ಆದರೆ ಅವರು ಮಧ್ಯಪಾನ ಮಾಡಲಿಲ್ಲ. ಪಾಪದಲ್ಲಿ (ಕತ್ತಲೆಯಲ್ಲಿ) ಜೀವಿಸುತ್ತಿದ್ದರು.

ನನಗೆ ತಿಳಿದ ಒಂದು ಘಟನೆಯನ್ನು ನಿಮಗೆ ಹೇಳಲು ಇಷ್ಟಪಡುತ್ತೇನೆ, ಒಮ್ಮೆ ವಿಶ್ವಾಸಿಯು ಸಹ ಹೀಗೆ ಸಭೆಯ ಮುಂದೆ ಸಾಕ್ಷಿ ಹೇಳುತ್ತಿದ್ದನು. ನಾನು ಮೊದಲು 10 ಬಾಟಲಿ ಕುಡಿಯುತ್ತಿದ್ದೆ ಈಗ 1 ಬಾಟಲಿ ಕುಡಿಯುತ್ತಿದ್ದೇನೆ ಇದು ನಿಜವಾದ ಸಾಕ್ಷಿಯಲ್ಲ; ಸಾಕ್ಷಿ ಹೇಳುವುದಕ್ಕಿಂತ ಸಾಕ್ಷಿಯಾಗಿ ಜೀವಿಸುವದು ಮುಖ್ಯ. **"ಕುಡಿಕರು ದೇವರಾಜ್ಯಕ್ಕೆ ಬಾಧ್ಯರಾಗುವುದಿಲ್ಲ"** (1 ಕೊರಿ. 6:9, 1 ಕೊರಿ. 5:11) ಎಂದು ವಾಕ್ಯವು ಸ್ಪಷ್ಟವಾಗಿ ಹೇಳುತ್ತದೆ, ಅದಕ್ಕೆ ಅವರು ಜ್ಞಾನೋಕ್ತಿಯಲ್ಲಿ, ತಿಮೊಥಿ ಪತ್ರಿಕೆ, ಯೋಹಾನ ಸುವಾರ್ತೆಯಲ್ಲಿ ಕಾನ ಊರಿನ ಮದುವೆಯಲ್ಲಿ, ಹಳೆಒಡಂಬಡಿಕೆಯಲ್ಲಿ ಬರೆದ ವಾಕ್ಯ ತೋರಿಸಿದರು. ಅದಕ್ಕೆ ಆ ವಾಕ್ಯದ ಗೂಡಾರ್ಥವನ್ನು ದೇವರು ನನಗೆ ಪ್ರಕಟಿಸಿದಾಗ ದೇವರ ಕೃಪೆಯಿಂದ ಪವಿತ್ರಾತ್ಮನ ಸಹಾಯದಿಂದ ಅವರಿಗೆ ತಿಳಿಸಿದೆ.

ಪ್ರಿಯರೇ, ನೋಡಿ ಸೈತಾನನಿಗೆ ಸಹ ವಾಕ್ಯ ಗೊತ್ತುಂಟು.

**ನಿನ್ನ ನಾಮಸ್ಮರಣೆಯು ನಮ್ಮ ಆತ್ಮಕ್ಕೆ ಕೇವಲ ಇಷ್ಟವಾಗಿದೆ. ರಾತ್ರಿಯಲ್ಲಿ ನಿನ್ನನ್ನು ಮನಃಪೂರ್ವಕವಾಗಿ ಹಾರೈಸಿದ್ದೇವೆ (ಯೆಶಾ. 26:8–9).**

ಆದಿಯಲ್ಲಿ ಹವ್ವಳಿಗೆ ದೇವರ ಮಾತನ್ನು ತಿರುಗಿಸಿ ವಂಚಿಸಿದನ್ನು ಕಾಣಬಹುದು. ಆತನಿಗೆ 6,000 ವರ್ಷ ಇತಿಹಾಸವಿದೆ ಎಂದು ಚರಿತ್ರಕಾರರು ಹೇಳುತ್ತಾರೆ, ಸ್ವತ: ಯೇಸು ಕ್ರಿಸ್ತನಿಗೆ ವಾಕ್ಯದ ಮೂಲಕ ಶೋಧಿಸಿದನು. ಆಗ ಯೇಸು ಕ್ರಿಸ್ತನು ಎಂಬುದಾಗಿ ಬರೆದದೆ ಎಂದು ಉತ್ತರಿಸಿದನ್ನು ಕಾಣಬಹುದು. ನೋಡಿ ಸೈತಾನನಿಗೆ ವಾಕ್ಯ ಇದೆ. ನಮಗಿಂತ ಚೆನ್ನಾಗಿ ಆತನಿಗೆ ಬೈಬಲ್ ಗೊತ್ತಿದೆ. ನಾನು ಇಲ್ಲಿ ಸೈತಾನನ ಬಗ್ಗೆ ವರ್ಣನೆ ಮಾಡುತ್ತಿಲ್ಲ. ಬದಲಾಗಿ ದಯಮಾಡಿ ಸತ್ಯವೇದವನ್ನು ಓದುವುದಕ್ಕಿಂತ ಮುಂಚೆ ಪ್ರಾರ್ಥನೆ ಮಾಡಿ ಪವಿತ್ರಾತ್ಮನ ಸಹಾಯ ಕೇಳಿಕೊಳ್ಳಿ. ಅದನ್ನು ಗ್ರಹಿಸುವುದಕ್ಕೆ, ಅರ್ಥೈಸುವುದಕ್ಕೆ ಮತ್ತು ವಾಕ್ಯದಲ್ಲಿ ಅಡಗಿಕೊಂಡಿರುವ ಮರ್ಮ ತಿಳಿಸುವುದಕ್ಕೆ ಕೇಳಿಕೊಳ್ಳಿ ಖಂಡಿತವಾಗಿ ದೇವರು ಸಹಾಯಮಾಡುತ್ತಾನೆ. ಈಡಿ ಸತ್ಯವೇದ ವರ್ಷಕ್ಕೆ ಒಂದು ಬಾರಿಯಾದರೂ ಓದಿ ಮುಗಿಸಿ ಹೀಗೆ ನೀವು ಸತ್ಯವೇದ ಶಾಲೆಯಲ್ಲಿ ಕಲಿತು ಬಂದವರಿಗಿಂತ ಹೆಚ್ಚಿನ ವಾಕ್ಯದ ಜ್ಞಾನ, ಪಾಂಡಿತ್ಯವನ್ನು ಹೊಂದಿಕೊಂಡಿರುತ್ತೀರಿ. ದಿನನಿತ್ಯವೂ ಎಲ್ಲದರಲ್ಲಿ ಶಿಸ್ತನ್ನು ಮಾಡಿಕೊಂಡಿದ್ದೇವೆ. ಊಟ, ಬಟ್ಟೆ, ಕೆಲಸದ ವಿಷಯದಲ್ಲಿ ಇದು ಒಳ್ಳೆದೇ ಅದಕ್ಕಿಂತ ಹೆಚ್ಚಾಗಿ ಆತ್ಮೀಕ ಅಭ್ಯಾಸ ಮತ್ತು ಶಿಸ್ತನ್ನು ಬೆಳೆಸಿಕೊಳ್ಳಿ. ನೀವು ವಾಕ್ಯದಲ್ಲಿ ಸಮೃದ್ಧಿಯಾಗಿ ಬೆಳೆದರೆ ಯಾರು ನಿಮಗೆ ಪ್ರಶ್ನೆ ಮಾಡಿದರೂ ಕೂಡಾ ವಾಕ್ಯ ಹೇಳಲು ಸಿದ್ಧರಾಗುತ್ತೀರಿ. ನೀವು ಯಾವುದೇ ದುರ್ಬೋಧನೆಗೆ ಬೀಳಲು ಸಾಧ್ಯವಿಲ್ಲ. ದಯಮಾಡಿ ವಾಕ್ಯದ ಜ್ಞಾನ ಇಲ್ಲದಿದ್ದರೆ ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಹೋಗಬೇಡಿ. ಇದರ ನಿಮಿತ್ತ ಅನೇಕರು ದಾರಿತಪ್ಪುವ ಸಾಧ್ಯತೆ ಉಂಟು. ಒಂದು ವೇಳೆ ಗೊತ್ತಿಲ್ಲದಿದ್ದರೆ ಆ ಪ್ರಶ್ನೆ ಬರೆದಿಟ್ಟುಕೊಂಡು ನಿಮ್ಮ ಸಭಾಪಾಲಕರ ಹತ್ತಿರ ಕೇಳಿ ತಿಳುಕೊಂಡು ಆ ಮೇಲೆ ಉತ್ತರಿಸಿ. ದಯಮಾಡಿ ಒಂದೇ ವಾಕ್ಯ ನೋಡಿ ಹೀಗೆ ಬರೆದಿದ್ದೆಯಲ್ಲಾ ಎಂದು ಮೋಸಹೋಗಬೇಡಿ. ಅದರ ಮೇಲಿನ ಮತ್ತು ಕೆಳಗಿನ ವಾಕ್ಯ ಓದಿ ಉದಾ: ಈ ವಿಷಯ ಯಾಕೆ ಹೇಳಲ್ಪಟ್ಟಿತ್ತು ಎಂಬುದಾಗಿ ಎಫೆಸ ಪತ್ರಿಕೆ ಪೂರ್ತಿಯಾಗಿ ಓದಿ ಬರೆದ ಗ್ರಂಥಕರ್ತನ ಉದ್ದೇಶ ತಿಳಿದುಕೊಳ್ಳಿ. ನೀವು ಪೂರ್ತಿಯಾಗಿ ಆ ಪುಸ್ತಕ ಓದಿದಾಗ ನಿಮಗೆ ಅರ್ಥ ಗೊತ್ತಾಗುತ್ತದೆ. ಇಲ್ಲದಿದ್ದರೆ ಅದಕ್ಕೆ ಸಂಬಂಧಪಟ್ಟ ವಾಕ್ಯ ಅನೇಕ ಕಡೆಗಳಲ್ಲಿ ಇರುತ್ತದೆ. ಒಂದು ವಾಕ್ಯ ಇನ್ನೊಂದು ವಾಕ್ಯಕ್ಕೆ ಯಾವಾಗಲೂ ಕನೆಕ್ಟ್ ಆಗಿರುತ್ತದೆ. ಇಲ್ಲದಿದ್ದರೆ ಆ ಪುಸ್ತಕ ಓದುವಾಗ ಯಾಕೆ ಈ ವಿಷಯ ಪದೇ ಪದೇ ಹೇಳಲ್ಪಟ್ಟಿದೆ ಒಂದು ವೇಳೆ ಅಲ್ಲಿನ ಕೊರತೆ ಇದೆ ಆಗಿರಬಹುದು. ಅದಕ್ಕೆ ಗ್ರಂಥಕರ್ತನು ದೇವರ ಸಹಾಯದಿಂದ ಅವರಿಗೆ ಅದನ್ನು ಮನದಟ್ಟು ಮಾಡುತ್ತಿದ್ದಾನೆ ಮಾತ್ರವಲ್ಲ ಇದನ್ನು ನಮಗೆ ಕೂಡಾ ಮನದಟ್ಟು ಮಾಡುತ್ತಿದ್ದಾನೆ. ನಿಮ್ಮನ್ನು ಕ್ರಮಿಕರಿಸಿಕೊಂಡು ಜಾಗ್ರತೆಯಾಗಿ ಆತ್ಮೀಕ ಜೀವಿತವನ್ನು ಕಾದುಕೊಳ್ಳಿರಿ. ಇವತ್ತು ಸತ್ಯವೇದವನ್ನು ದೇವ ಜನರು, ಸೇವಕರು, ಸರಿಯಾಗಿ ಓದದ ನಿಮಿತ್ತವಾಗಿ ಮತ್ತು ವಾಕ್ಯವನ್ನು ತಪ್ಪಾಗಿ ವ್ಯಾಖ್ಯಾನಿಸುವುದರಿಂದ ಅನೇಕರು ಹಾದಿ ತಪ್ಪುತ್ತಿದ್ದಾರೆ, ಅನೇಕ ಹೊಸ ಹೊಸ ಪಂಗಡ ಹುಟ್ಟುತ್ತಿದ್ದೆ ಕಾರಣ ವಾಕ್ಯದ ಪರಿಜ್ಞಾನ ಇಲ್ಲದ ನಿಮಿತ್ತವಾಗಿ. ಚೆನ್ನಾಗಿ ತಿಳಿದುಕೊಳ್ಳಿ ಒಬ್ಬ ಸಭೆಯ ಸಭಾಪಾಲಕರು ಆಗಬೇಕಾದವರು ಮೊದಲು ವಾಕ್ಯದಲ್ಲಿ ಚೆನ್ನಾಗಿ ಬೆಳೆಯಲಿ ಇಲ್ಲದಿದ್ದರೆ ಹಿಂದೆ ಬರುವ ಕುರಿಗಳು ತಪ್ಪಾದ ಸಂಗತಿಗೆ ಕಿವಿಗೊಟ್ಟು ಇನ್ನು ಅನೇಕ ಪಂಗಡ ಹುಟ್ಟಲಿಕ್ಕೆ ಸಾಧ್ಯತೆ ಉಂಟು.

ಇವತ್ತು ದೇವರು ನನಗೆ ದಯಪಾಲಿಸಿದ ಸಭಾಪಾಲಕರಾದ ಪಾ॥ ಸುನಿಲ್‌ರವರು ಇವರು ನನಗೆ ಆತ್ಮೀಕ ತಂದೆಯಾಗಿದ್ದಾರೆ. ಇವತ್ತು ವಾಕ್ಯದಲ್ಲಿ ನನ್ನನ್ನು ಬೆಳೆಸಿದ್ದಾರೆ. ಸಭೆಯನ್ನು ಕೂಡಾ ಒಳ್ಳೆ ಸುಬೋಧನೆಯ ವಾಕ್ಯೋಪದೇಶದಲ್ಲಿ ಬೆಳೆಸಿದ್ದಾರೆ ಮತ್ತು ಪ್ರತಿ ವಾರವೂ ನಮಗೆ ದೇವರಿಂದ ಹೊಂದಿಕೊಂಡ ಉಪದೇಶವನ್ನು ತಿಳಿಸುವುದರ ಮೂಲಕ ಕರ್ತನ ವಾಕ್ಯದಲ್ಲಿ ಸಮೃದ್ಧಿಯಾಗಿ ಬೆಳೆಯಲು ನಮಗೆ ಸಾಧ್ಯವಾಯಿತು. ಎಲ್ಲಾ ದುರುಪದ್ದೇಶದ ಬಗ್ಗೆ ಎಚ್ಚರಿಕೆಯಾಗಿರಬೇಕೆಂದು ವಾಕ್ಯಾನುಸಾರವಾಗಿ ಅದನ್ನು ನಮಗೆ ಕಲಿಸಿಕೊಡುತ್ತಾರೆ. ಜ್ಞಾನಿಯ ಬೋಧೆ ಜೀವದ ಬುಗ್ಗೆ; ಅದನ್ನಾಲಿಸುವವನು ಮೃತ್ಯು ಪಾಶದಿಂದ ತಪ್ಪಿಸಿಕೊಳ್ಳುವನು. ಆದುದರಿಂದ ಒಬ್ಬ ಸಭಾ ಸೇವೆ ಮಾಡುವವನು ಮತ್ತು ಬೋಧಕನು ವಾಕ್ಯದಲ್ಲಿ ಚೆನ್ನಾಗಿ ಬೆಳೆದಿರಬೇಕು ಮತ್ತು ದೇವರಿಂದ ನಡೆಸಲ್ಪಡುವವನಾಗಿರಬೇಕು, ಜೀವನ ಇತರರಿಗೆ ಮಾದರಿಯಾಗಿರಬೇಕು.

ಯಾಕೆ ಪೌಲನು ಎಫೆಸ ಸಭೆಯವರಿಗೆ ಮಧ್ಯಪಾನ ಮಾಡಿ ಮತ್ತರಾಗಬೇಡಿರಿ; ಅದರಿಂದ ಪಟಿಂಗತನವು ಹುಟ್ಟುತ್ತದೆ ಈ ಮಾತಿನ ಅರ್ಥವನ್ನು ದೇವರ ಕೃಪೆಯಿಂದ ಮುಂದಿನ ಸಂಚಿಕೆಯಲ್ಲಿ ತಿಳಿಸಲು ಇಷ್ಟಪಡುತ್ತೇನೆ. ದಯಮಾಡಿ ಪ್ರಾರ್ಥಿಸಿರಿ.

ಕರ್ತನು ನಿಮ್ಮೆಲ್ಲರನ್ನು ಹೇರಳವಾಗಿ ಆಶೀರ್ವದಿಸಲಿ, ಆಮೆನ್

**ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರಸಿಬಿಡುವನು**

**(ಯೆಶಾ. 25:8).**

# ನೀವು ನಮ್ಮ ಸೇವೆಯೊಂದಿಗೆ ಪಾಲುಗಾರರಾಗುವಿರಾ......?

ಪ್ರಿಯ ವಾಚಕರೇ

ನಿಮಗೊಂದು ಸಂತೋಷದ ಸುದ್ಧಿ, ನಮ್ಮ ಸೇವೆಯೊಂದಿಗೆ ಪಾಲುಗಾರರಾಗಲು ಬಯಸುವುದಾದರೆ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ನಾವೆಲ್ಲರೂ ಒಟ್ಟಾಗಿ ದೇವರ ರಾಜ್ಯವನ್ನು ಕಟ್ಟೋಣ.

**ಈ ಕೆಳಕಂಡ ನಮ್ಮ ಯಾವುದಾದರೂ ಸೇವೆಯಲ್ಲಿ ನೀವು ಪಾಲುದಾರರಾಗಬಹುದು.**

| | |
|---|---|
| ದೇವರ ಸ್ವರ ಸೇವೆಗಾಗಿ ☐ | ಪುರುಷರ ಪುನರ್‌ವಸತಿ ಕೇಂದ್ರ ☐ |
| ಮಹಿಳಾ ಪುನರ್‌ವಸತಿ ಕೇಂದ್ರ ☐ | ಸ್ಫೂರ್ತಿ ಮಕ್ಕಳ ಸೇವೆಗಾಗಿ ☐ |
| ಅಂಗವಿಕಲರ ಸೇವೆಗಾಗಿ ☐ | ವೃದ್ಧರ ಸೇವೆಗಾಗಿ ☐ |
| ತಿಂಗಳಿಗೊಮ್ಮೆ : ☐ | ಎರಡು ತಿಂಗಳಿಗೊಮ್ಮೆ : ☐ |
| ಮೂರು ತಿಂಗಳಿಗೊಮ್ಮೆ : ☐ | ಆರು ತಿಂಗಳಿಗೊಮ್ಮೆ : ☐ |
| ವರ್ಷಕ್ಕೊಮ್ಮೆ : ☐ | ಸಾಧ್ಯವಾದಾಗ : ☐ |

**₹. 500/-, 1000/-, 2000/-, 5000/-, 10,000/-, 20,000/-**

ನಿಮ್ಮಿಂದ ಎಷ್ಟು ಕೊಡಲು ಸಾಧ್ಯವೋ ಅದನ್ನು ಬರೆದು ಕಳುಹಿಸಿ. ನಿಮಗೋಸ್ಕರವಾಗಿ ನಮ್ಮ ಪ್ರಾರ್ಥನಾ ಗೋಪುರದಲ್ಲಿ ಪ್ರಾರ್ಥಿಸುತ್ತಾರೆ. ನಿಮ್ಮ ಹೆಸರು ವಿಳಾಸ ದೂರವಾಣಿ ಸಂಖ್ಯೆ ಹಾಗೂ ಇ–ಮೇಲ್ ಐಡಿ ಕಳುಹಿಸಿ ಕೊಡಿ.

Your Name ............................................................ Address ............................................................

............................................................ Pin .................................... District ....................................

Phone / Mobile No.:...................................................... Email ........................................................

D.D. / Cheque or Cash ...................................................................

**ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿರಿ : 9902334941, 9964070654, 0820 2589070**
ಡಿಜಿಎಂ ಬೇತೇಲ್ ಕಛೇರಿ, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.

## BANK ACCOUNT DETAILS :

**CANARA BANK, Shankarpura Branch. A/c Name : DGMBC Trust**
**A/c. No. 0636101011338 IFSC : CNRB 0000636 Swift : CNRBINBBRFM**

**CORPORATION BANK, Kurkal Branch A/c Name : DGMBC Trust**
**A/c. No. 018900101007084 IFSC : CORP 0000189 Swift : CORPINBB148**

**ICICI BANK, Udupi Branch A/c Name : DGMBC Trust A/c. No. 007201025754**
**Swift : ICICINBBXXX**

"ಒಬ್ಬನು ತನ್ನ ಧನವನ್ನು ಚೆಲ್ಲಿದರೂ ಅವನಿಗೆ ವೃದ್ಧಿ; ಮತ್ತೊಬ್ಬನು ನ್ಯಾಯವಾದುದ್ದನ್ನು ಬೀಗಿಹಿಡಿದರೂ ಅವನಿಗೆ ಬಡತನ. ಉದಾರಿಯು ಪುಷ್ಟನಾಗುವನು; ನೀರು ಹಾಯಿಸುವವನಿಗೆ ನೀರು ಸಿಕ್ಕುವದು" (ಜ್ಞಾನೋ. 11:24–25).

"ಬಡವರಿಗೆ ದಯೆತೋರಿಸುವವನು ಯೆಹೋವನಿಗೆ ಸಾಲಕೊಡುವನು; ಆ ಉಪಕಾರಕ್ಕೆ ಯೆಹೋವನೇ ಪ್ರತ್ಯುಪಕಾರ ಮಾಡುವನು (ಜ್ಞಾನೋ. 19:17).

"ಬಡವನಿಗೆ ದಾನಮಾಡುವವನು ಕೊರತೆಪಡನು" (ಜ್ಞಾನೋ. 28:27).

**ಯೆಹೋವನ ಹಸ್ತವು ಈ ಪರ್ವತದಲ್ಲಿ ನೆಲೆಯಾಗಿರುವದು**
(ಯೆಶಾ. 25:10).

# ನಿಮ್ಮಗೆಲ್ಲಾ ಸಂತಸ ಸುದ್ದಿ

# VOICE OF GOD

## (ದೇವರ ಸ್ವರ)

ಶೀಘ್ರದಲ್ಲೇ ಆಂಗ್ಲ ಮಾಸ ಪತ್ರಿಕೆಯು ಪ್ರಕಟವಾಗಲಿದೆ. ಇದನ್ನು ಬಯಸುವವರು ನಿಮ್ಮ ವಿಳಾಸ ನಮಗೆ ಬರೆದು ಕಳುಹಿಸಿ ರೂ. 150 ವಾರ್ಷಿಕ ಚಂದಾ ಹಣವನ್ನು ಭರಿಸಬಹುದು. ದಯಮಾಡಿ ತಾವೆಲ್ಲರೂ ಈ ಮಾಸ ಪತ್ರಿಕೆಗಾಗಿ ಪ್ರಾರ್ಥಿಸಬೇಕು ಹಾಗೂ ತಮ್ಮಿಂದ ಆಗುವ ಸಹಕಾರವನ್ನು ಕೊಡಬೇಕಾಗಿ ತಮ್ಮಲ್ಲಿ ವಿನಂತಿಸುತ್ತೇವೆ ನಿಮ್ಮ ನೆಚ್ಚಿನ ಸ್ನೇಹಿತರು, ಬಂಧುಗಳ ವಿಳಾಸವನ್ನು ನಮಗೆ ಕಳುಹಿಸಿ ಅವರ ವಾರ್ಷಿಕ ಚಂದಾವನ್ನು ತಾವು ಭರಿಸಿದ್ದಾಗಿದಲ್ಲಿ ಅವರೆಲ್ಲರೂ ಆತ್ಮೀಕ ಪ್ರಯೋಜನ ಪಡೆದುಕೊಳ್ಳಲು ಸಾಧ್ಯ. ಪರಲೋಕದಿಂದ ತಾವೆಲ್ಲರೂ ಪ್ರತಿಫಲ ಹೊಂದಿಕೊಳ್ಳುವಿರಿ. ತಮ್ಮ ಪ್ರತಿಗಳನ್ನು ಕಾಯ್ದಿರಿಸಿಕೊಳ್ಳಿ.

---

## ಪ್ರಾರ್ಥನಾ ಮನವಿಗಳು

* ಲೋಕಸಭಾ ಚುನಾವಣೆಯು ಜನತೆಗೆ ವಂಚನೆಯಾಗದಂತೆ, ದೌರ್ಜನ್ಯಗಳು, ಮೋಸಗಳು, ಯಾವುದೇ ಸಮಸ್ಯೆಗಳಿಲ್ಲದಂತೆ ಶಾಂತಿ ಮತ್ತು ಸಮಾಧಾನಕರವಾಗಿ ಚುನಾವಣೆ ನಡೆಯಲು ಎಲ್ಲಾ ರಾಜಕೀಯ ಪಕ್ಷಗಳಿಗಾಗಿ ಪ್ರಾರ್ಥಿಸಿರಿ.
* ದೇವರನ್ನು ಕುರಿತು ಭಯಭಕ್ತಿ ಇರುವವರು ಮಾತ್ರ ಸಂಸತ್ ಭವನದಲ್ಲಿ ಆಳ್ವಿಕೆಗೆ ಬರುವಂತೆ ಪ್ರಾರ್ಥಿಸಿರಿ.
* ದೇಶದ ಅಭ್ಯುದಯಕ್ಕಾಗಿ ಮತ್ತು ಜನರ ಒಳಿತಿಗಾಗಿ ಶ್ರಮಿಸುವವರು ಮಾತ್ರ ಆಳ್ವಿಕೆಗೆ ಬರುವಂತೆ ಪ್ರಾರ್ಥಿಸಿರಿ.
* ಒಬ್ಬ ಒಳ್ಳೆಯ ಪ್ರಧಾನ ಮಂತ್ರಿಯನ್ನು ಕರ್ತನು ನಮಗೆ ಕೊಡುವಂತೆ ಪ್ರಾರ್ಥಿಸಿರಿ.
* ಚುನಾವಣಾ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆಯು ಕಾರ್ಯನಿರ್ವಹಿಸಲು ಸುಭದ್ರತೆಗಾಗಿ ಪ್ರಾರ್ಥಿಸಿರಿ.
* ಎಲ್ಲರೂ ಮತವನ್ನು ಚಲಾಯಿಸುವಂತೆ ಪ್ರಾರ್ಥಿಸಿರಿ.
* ಎಸ್.ಎಸ್.ಎಲ್.ಸಿ ಹಾಗೂ ಪಿಯುಸಿ ಪರೀಕ್ಷೆಯನ್ನು ಬರೆದಿರುವ ಪ್ರತಿಯೊಂದು ವಿದ್ಯಾರ್ಥಿಗಳು ಉತ್ತೀರ್ಣರಾಗುವುದಕ್ಕಾಗಿ, ಯಾವುದೇ ಆತ್ಮಹತ್ಯೆಗಳು ನಡೆಯದಂತೆ ಕರ್ತನು ಪ್ರತಿಯೊಂದು ಆತ್ಮಗಳನ್ನು ರಕ್ಷಿಸುವುದಕ್ಕಾಗಿ ಪ್ರಾರ್ಥಿಸಿರಿ.
* ಬೇಸಿಗೆ ಕಾಲದಲ್ಲಿ ಯಾವುದೇ ನೀರಿನ, ವಿದ್ಯುತ್‌ಚ್ಛಕ್ತಿಯ ಕೊರತೆಗಳುಂಟಾಗದ ಹಾಗೆ ಪ್ರಾರ್ಥಿಸಿರಿ.

---

ಅಂಜಬೇಡ; ನಿನ್ನನ್ನುದ್ಧರಿಸಲು ನಾನೇ ನಿನ್ನೊಂದಿಗಿರುವೆನು

(ಯೆರೆ. 1:8).

# ದೇವರ ಪ್ರಶ್ನೆಗಳು

***ಕಳೆದ ಸಂಚಿಕೆಯಿಂದ ಮುಂದುವರಿದಿದೆ.***

2) ನೀನು ಇಲ್ಲೇನು ಮಾಡುತ್ತೀ? (1 ಅರಸು. 19:9). (what are doing here)

ಮೇಲಿನ ಈ ಪ್ರಶ್ನೆಯನ್ನು ದೇವರು ಎಲೀಯನಿಗೆ 2 ಬಾರಿ ಕೇಳುತ್ತಾನೆ (1 ಅರಸು. 19:13) ದುಷ್ಟ ಸ್ತ್ರೀಯಾದ ಈಜೆಬೇಲಳಿಂದ ಬಾಧಿಸಲ್ಪಟ್ಟ ಎಲೀಯನು ಮರಣವನ್ನು ಅಪೇಕ್ಷಿಸುತ್ತಾನೆ. 40 ದಿನಗಳ ಪ್ರಯಾಣ ಮಾಡಿ ಹೋರೇಬಿನ ಗವಿಯಲ್ಲಿ ಇಳುಕೊಂಡಾಗ ದೇವರು ಕೇಳುವ ಪ್ರಶ್ನೆಯೇ ಇದಾಗಿದೆ. ಎಲೀಯನು ಕರ್ತನೇ ದೇವರೆಂದು ನಿರೂಪಿಸಿ ಪರಲೋಕದಿಂದ ಪ್ರಾರ್ಥನೆ ಮೂಲಕ ಬೆಂಕಿ ಇಳಿಯುವಂತೆ ಮಾಡಿ ವೈರಿಗಳನ್ನು ಕೊಂದ ಸಮಾಚಾರವನ್ನು ಈಜೆಬೇಲಳು ನಾಳೆ ಇಷ್ಟು ಹೊತ್ತಿಗೆ ನಾನು ನಿನ್ನ ಪ್ರಾಣವನ್ನು ತೆಗೆಯುವೆನು ಎಂಬ ಈಜೆಬೇಲಳ ಮಾತನ್ನು ಕೇಳಿ ತನ್ನ ಪ್ರಾಣ ರಕ್ಷಣೆಗಾಗಿ ಹೋರೇಬಿನಲ್ಲಿ ಗವಿಯಲ್ಲಿರುತ್ತಾನೆ. ದೇವರು ಎಲೀಯನಿಗೆ ಕೇಳಿದ ಈ ಪ್ರಶ್ನೆಗೆ (ನೀನು ಇಲ್ಲೇನು ಮಾಡುತ್ತೀ?) ಎಲೀಯನು ಇಸ್ರಾಯೇಲ್ಯರೆಲ್ಲರು ನಿನ್ನ ನಿಬಂಧನೆಯನ್ನು ಮೀರಿದ್ದಾರೆ. ಯಜ್ಞವೇದಿಗಳನ್ನು ಕೆಡವಿಹಾಕಿದ್ದಾರೆ. ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದಾರೆ. ನಾನೊಬ್ಬನೆ ಉಳಿದು ನಿನ್ನ ಗೌರವವನ್ನು ಕಾಪಾಡುವುದರಲ್ಲಿ ಆಸಕ್ತನಾದೆನು. ಆದರೆ ನನ್ನ ಪ್ರಾಣಕ್ಕೆ ಅಪತ್ತು ಬಂದಿದೆ ಎನ್ನುತ್ತಾನೆ. (1 ಅರ. 19:9–10–14). ಆಗ ದೇವರು 2 ಬಾರಿ ಇದೇ ಪ್ರಶ್ನೆ ಕೇಳಿ ನೀನು ಬಂದ ದಾರಿಯಿಂದ ಹಿಂತಿರುಗಿ ದಮಸ್ಕದ ಅರಣ್ಯಕ್ಕೆ ಹೋಗು ಎಂದು ಸೂಚಿಸುತ್ತಾನೆ. (1 ಅರಸು. 19:14). ಹೋರಾಟ ಬರುವುದು ಎಂದು ತಪ್ಪಿಸಿಕೊಳ್ಳಲು ಹೊರಟಿರುವ ಎಲೀಯನು ದೇವರ ಚಿತ್ತವಿಲ್ಲದ ಸ್ಥಳಕ್ಕೆ ಬಂದಾಗ ಈ ಪ್ರಶ್ನೆ ಎಲೀಯನು ದೇವರಿಂದ ನಿರೀಕ್ಷಿಸಲಿಲ್ಲ. ಆದರೆ ದೇವರು ಬಂದ ದಾರಿಯಲ್ಲಿ ಹಿಂತಿರುಗಲು ಸೂಚಿಸುತ್ತಾನೆ. ಪ್ರಿಯ ದೇವ ಮಗುವೇ, ದೇವರ ಚಿತ್ತವಿಲ್ಲದ ಸ್ಥಳದಲ್ಲಿ ಬಂದು ಅಡಗಿರುವುದಾದರೆ ನಿನಗೂ, ನನಗೂ ಈ ಪ್ರಶ್ನೆ ದೇವರು ಕೇಳೇ ಕೇಳುತ್ತಾನೆ. ನೀನು ಇಲ್ಲೇನು ಮಾಡುತ್ತೀ?. ಪ್ರಿಯ ದೇವ ಸೇವಕನೇ, ನಿನ್ನ ಸೇವಾ ಪ್ರಾಂತ್ಯದಲ್ಲಿ ಕಠಿಣ ಹೋರಾಟ, ಯುದ್ಧಗಳು ನಿನಗೆ ಎದುರಾಗಬಹುದು. ಅಥವಾ ಯಾವ ಆತ್ಮವನ್ನು ಆದಾಯ ಮಾಡಲು ಆಗಲಿಲ್ಲ ಎಂದು ಕುಗ್ಗಿಹೋಗಿರುವೆಯಾ? ಆ ಸ್ಥಳವನ್ನು ಬಿಟ್ಟು ಬಿಡಲು ನಿರ್ಧರಿಸಿದೆಯಾ? ಸ್ವಲ್ಪ ಯೋಚಿಸು ಆ ಹೋರಾಟದ ಸ್ಥಳದಲ್ಲೇ ದೇವರು ನಿನ್ನನ್ನು ಸ್ಥಿರಪಡಿಸುವ ದಿನ ಬರುವುದು ಕಾದುಕೊಂಡಿರು, ಹಾಗೂ ವೈರಿಯ ಮುಂದೆ ನೀನು ಇರುವಿಯಾದರೆ ದೇವರು ನಿನಗೋಸ್ಕರ ಅದೇ ವೈರಿಯ ಮುಂದೆ ಔತಣವನ್ನು ಸಿದ್ಧಪಡಿಸಿದ್ದಾನೆ. ನೀನು ಹೋರಾಟದ ಮಧ್ಯದಲ್ಲೇ ಇರಬೇಕೆಂದು ದೇವರು ಬಯಸುತ್ತಾನೆ. ದೇವರ ಚಿತ್ತವಿಲ್ಲದೆ ಅಥವಾ ಆತನ ಅನುಮತಿಯಿಲ್ಲದೆ ಆ ಸ್ಥಳವನ್ನು ಬಿಡಬೇಡಾ. ದೇವರು ನಿನ್ನನ್ನು ನಂಬಿಗಸ್ತನೆಂದು ಸೇವೆ ಕೊಟ್ಟಿರುವಾಗ ಅಪನಂಬಿಗಸ್ತನಾಗಿ ನೀನು ಅದನ್ನು ಕಳೆದು ಕೊಳ್ಳಬೇಡಾ. ನಿನಗಾದ ಅವಮಾನಕ್ಕೆ ಎರಡರಷ್ಟು ಮಾನವನ್ನು ಕೊಡುವನು. ಪ್ರವಾದಿಯಾದ ಯೋನನು ದೇವರು ಸೂಚಿಸಿದ ನಿನವೆಯನ್ನು ಬಿಟ್ಟು ತಾರ್ಷಿಸಿಗೆ ಓಡಿ ಹೋದನು. ಆದರೆ ದೇವರು ಅವನ ಪ್ರಯಾಣ ಮಧ್ಯದಲ್ಲೇ ತಡೆತಂದನು. ಹಡಗು ಅಪಾಯಕ್ಕೆ ಸಿಕ್ಕಿ ಹಾಕಿಕೊಂಡಿತ್ತು. ಎಲ್ಲಾ ಜನರೂ ತಮ್ಮ ತಮ್ಮ ದೇವರನ್ನು ರಕ್ಷಿಸಲು ಮೊರೆಯಿಡುವಾಗ ಯೋನನು ನಿದ್ರೆಗೆ ಜಾರಿದನು. ಪ್ರಾರ್ಥಿಸಲಾಗದ ಸ್ಥಿತಿ ಅವನದಾಗಿತ್ತು. ಯೋನನೇ ನೀನು ಇಲ್ಲೇನು ಮಾಡುತ್ತೀ?. ನವೋಮಿ ಬೇತ್ಲೆಹೇಮಿನಲ್ಲಿ ಸ್ವಲ್ಪ ಕಾಲದ ಬರ ಬಂತೆದ್ದು ರೊಟ್ಟಿಯ ಮನೆಯನ್ನು ಬಿಟ್ಟು ಅನ್ಯದೇಶವಾದ ಮೋವಾಬ್‌ಗೆ ಪ್ರಯಾಣ ಬೆಳೆಸಿದಳು. ಆದರೆ ದಾರಿಯಲ್ಲಿ ಗಂಡನು ಸತ್ತನು. ಆ ನಂತರ ಕ್ರಮೇಣ ಇಬ್ಬರು ಗಂಡು ಮಕ್ಕಳನ್ನು ಕಳೆದುಕೊಂಡು ಒಬ್ಬಟಿಂಗಳಾದಳು. ಸ್ವಲ್ಪಕಾಲದ ಹೋರಾಟ ಬಂದರೂ ಬೇತ್ಲೆಹೇಮ್‌ನ ಅನುಭವವನ್ನು ಮೋವಾಬ್ ನಿನಗೆ ಕೊಡಲು ಸಾಧ್ಯನಾ? ನಷ್ಟದ ಮೇಲೆ ನಷ್ಟ , ಕಷ್ಟದ ಮೇಲೆ ಕಷ್ಟ. ದೇವ ಮಗುವೇ, ದೇವರ ಚಿತ್ತವಿಲ್ಲದ ಸ್ಥಳಕ್ಕೆ ನಿನ್ನ ಪ್ರಯಾಣವನ್ನು ಬೆಳೆಸಬೇಡಾ, ಕುಗ್ಗಿಹೋಗಬೇಡಾ, ಸೋತು ಹೋಗಬೇಡಾ. ಕುಗ್ಗಿ ಹೋದವರನ್ನು ವೈರಿಯು ಮರೆಯಾಗಿ ಹೊಂಚು ಹಾಕಿ ಬಲೆಯೊಡ್ಡಿ ಹಿಡಿದು ಎಳೆದುಕೊಂಡು ಹೋಗುತ್ತಾನೆ (ಕೀರ್ತ. 10:9). ನಿನ್ನ ಪ್ರತಾಪವನ್ನು ಧರಿಸಿಕೋ. ನಿನ್ನ ಚೆಂದದ ಉಡುಪನ್ನು ಹಾಕಿಕೋ. ಇಂದಿನಿಂದ ಅಶುದ್ಧರೂ, ಸುನ್ನತಿಯಿಲ್ಲದರೂ ನಿನ್ನೊಳಗೆ ಪ್ರವೇಶಮಾಡರು. 2 ಪ್ರಶ್ನೆಗಳನ್ನು ಇಬ್ಬರು ವ್ಯಕ್ತಿಗಳಿಗೆ ಬೇರೆ ಬೇರೆ ಸಂದರ್ಭಗಳಲ್ಲಿ ದೇವರು

**ವಯಸ್ಕರ ಸ್ವರ**

**ಯೆಹೋವನೇ, ನೀನು ನಮ್ಮ ಮಧ್ಯದಲ್ಲಿರುತ್ತೀ, ನಾವು ನಿನ್ನ ಹೆಸರಿನವರು, ನಮ್ಮನ್ನು ಕೈಬಿಡಬೇಡ (ಯೆರೆ. 14:9).**

ಕೇಳಿರುವುದನ್ನು ನಾವು ಧ್ಯಾನಿಸಿದ್ದೇವೆ. ಮೊದಲನೆಯದಾಗಿ ನೀನು ಎಲ್ಲಿರುತ್ತೀ? ಎರಡನೆಯದಾಗಿ ನೀನು ಇಲ್ಲೇನು ಮಾಡುತ್ತಿ? ಇದನ್ನು ಓದಿದ ನನ್ನ ಸಹೋದರನೇ ಈ ಪ್ರಶ್ನೆಗಳನ್ನು ದೇವರು ನಿನಗೆ ಕೇಳುವ ಮೊದಲೇ ನೀನು ನಿನಗೇ ಕೇಳುವನಾಗು. ನಾನು ಎಲ್ಲಿದ್ದೇನೆ? ನಾನು ಹೇಗೆ ಇರಬೇಕೆಂದು ದೇವರು ನನ್ನನ್ನು ಕರೆದಿದ್ದಾನೆ? ಎರಡನೆಯದಾಗಿ ನಾನು ಇಲ್ಲೇನು ಮಾಡುತ್ತೇನೆ? ನಾನು ಇರಬೇಕಾದ ಸ್ಥಳವು ಸರಿಯಾದ ಸ್ಥಳವೋ ಅಥವಾ ತಪ್ಪಾದ ಸ್ಥಳವೋ? ಪ್ರಶ್ನಿಸಿಕೋ.

ಪ್ರಿಯ ದೇವ ಮಗುವೆ ದೇವರು ನಿನ್ನನ್ನು ಸ್ವಲ್ಪಕಾಲದ ಬೋಗದ ಜೀವಿತಕ್ಕೆ, ಅಳಿದು ಹೋಗುವ ಜೀವಿತಕ್ಕಾಗಿ ಕರೆಯಲಿಲ್ಲ. ಯುಗಯುಗಾಂತರಕ್ಕೂ ಅನುಭವಿಸಬೇಕಾದ ಶ್ರೇಷ್ಠ ಜೀವಿತಕ್ಕಾಗಿ ದೇವರು ನಿನ್ನನ್ನು ಕರೆದಿರುತ್ತಾನೆ. ಆತನ ಸ್ವರಕ್ಕೆ ಕಿವಿಗೊಟ್ಟು ಆತನನ್ನು ಹಿಂಬಾಲಿಸು. **ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ. ನಾನು ಅವುಗಳನ್ನು ಬಲ್ಲೆನು, ಅವು ನನ್ನ ಹಿಂದೆ ಬರುತ್ತವೆ, ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ. ಅವು ಎಂದಿಗೂ ನಾಶವಾಗುವುದೇ ಇಲ್ಲ. ಅವುಗಳನ್ನು ಯಾರೂ ನನ್ನ ಕೈಯೊಳಗಿನಿಂದ ಕಸಕೊಳ್ಳರು"** (ಯೋಹಾ. 10:27–28).

ಮುಂದುವರಿಯುವದು......

ಕರ್ತನಲ್ಲಿ ನಿಮ್ಮ ಪ್ರೀತಿಯ

**– ಪಾ॥ ರೊನಾಲ್ಡ್ ಮಚಾದೋ**
ಬೇತೇಲ್ ಚರ್ಚ್ ಕಾಮಗೆರೆ.

## ನಮ್ಮೊಂದಿಗೆ ಆಚರಿಸಿ

**ನಿಮ್ಮ ಹುಟ್ಟಿದ ದಿನ, ನಿಮ್ಮ ಮದುವೆ ದಿನ ನಿಮ್ಮ ಮಕ್ಕಳ ಹುಟ್ಟಿದ ದಿನ ಹಾಗೂ ನಿಮ್ಮ ನೆಚ್ಚಿನ ಗೆಳೆಯ/ಗೆಳತಿಯರ ಹುಟ್ಟಿದ ದಿನವನ್ನು ನಮ್ಮ ಅನಾಥಾಶ್ರಮದ ನಿವಾಸಿಗಳೊಂದಿಗೆ ಆಚರಿಸಲು ಬಯಸುವುದಾದರೆ ನಿಮ್ಮೆಲ್ಲರಿಗೂ ಸ್ವಾಗತ**




ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ
**ಮೊಬೈಲ್: 9902334941**



"ದಯಾದೃಷ್ಟಿಯವನು ಆಶೀರ್ವಾದವನ್ನು ಪಡೆಯುವನು;
ತನ್ನ ಅನ್ನವನ್ನು ಬಡವರಿಗೆ ಕೊಡುತ್ತಾನಲ್ಲವೆ." ಜ್ಞಾನೋಕ್ತಿ 22:9.

## ಆಶ್ರಮದ ಅವಶ್ಯಕತೆಗಳು

1. 30 ಟೇಬಲ್
2. 60 ಬೆಂಚ್
3. ಟೆಂಪೋ ಟ್ರಾವಲ್ಸ್
4. ಅಕ್ಕಿ, ಸಕ್ಕರೆ, ದವಸಧಾನ್ಯ
5. 50 ಮಂಚ

ದಾನಿಗಳು ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :
**9902334941, 08202002781, 09964070654.**

ನನಗೆ ದೊರೆತ ನಿನ್ನ ಮಾತುಗಳನ್ನು ಆಹಾರಮಾಡಿಕೊಂಡೆನು
(ಯೆರೆ. 15:16).

# ಭಕ್ತರ ಹೇಳಿಕೆಗಳು :

* ಮ್ಯಾಥ್ಯೂ ಹೆನ್ರಿಯವರ ಹೇಳಿಕೆ :– ದೇವರು ತನ್ನ ಜನರನ್ನು ಕರುಣಿಸಲು ಸಿದ್ಧನಾಗಬೇಕಾದರೆ ಮೊತ್ತ ಮೊದಲು ಆತನ ಜನರು ಪ್ರಾರ್ಥಿಸಲು ಸಿದ್ಧವಾಗಬೇಕು.
* ನಾವು ದೇವರ ಬಳಿ ಪ್ರಾರ್ಥಿಸಲು ಹೋಗುವಾಗ, ಸೈತಾನನು ಅವನ ವಿರೋಧವಾಗಿ ಹೋರಾಡಲು ನಾವು ಬಲ ಪಡೆಯುವವೆಂದು ತಿಳಿದು ತನ್ನ ಸತತ ಹೋರಾಟವನ್ನು ನಮ್ಮ ಮೇಲೆ ಬಿಡಲೊಲ್ಲನು'

  – ಆರ್. ಸಿಬ್ಸ್.
* ಕ್ರಿಸ್ತನೇ ಅಭಿಷೇಕ ಹೊಂದಿದ ನಂತರವೇ ಪ್ರಸಂಗಿಸಲು ಹೋಗಿದ್ದಲ್ಲಿ, ಯಾವ ಯೌವನಸ್ಥನು ಅಭಿಷೇಕ ಹೊಂದದೆ ಪವಿತ್ರಾತ್ಮನ ಬಲ ಪಡೆಯದೆ ಪ್ರಸಂಗಿಸಬಾರದು.

  – ಎಫ್. ಬಿ. ಮೇಯರ್.
* ಕ್ರೈಸ್ತತ್ವದ ಚಿಹ್ನೆ (ಗುರುತು) ಶಿಲುಬೆಯಲ್ಲ, ಬದಲಾಗಿ ಅಗ್ನಿಮಯವಾದ ನಾಲಿಗೆಗಳೇ.

  – ಸ್ಯಾಮ್ಯುಯೆಲ್ ಚಾಡ್ವಿಕ್.
* ಸಭೆಯು ಇಂದು ಕಲ್ವಾರಿಯ ಮತ್ತು ಪಂಚಾಶತ್ತಮದ ನಡುವೆ ಎಲ್ಲೋ ಸ್ಥಗಿತವಾಗಿ ನಿಂತಿದೆ.

  – ಜೆ. ಐ. ಬ್ರೈಸ್.
* ಪರಿಶುದ್ಧತೆಯ ದೀಕ್ಷಾಸ್ನಾನವು, ದೈವೀಕತೆಯಿಂದ ಕೂಡಿದ ಜೀವನವೇ ನಮ್ಮ ಈ ಗಳಿಗೆಯಲ್ಲಿ ಪ್ರಕಟವಾಗಬೇಕಾದ ಅಂಶ.

  – ಡಂಕನ್ ಕ್ಯಾಂಪ್‌ಬೆಲ್.

---

## ವಿಶ್ವಾಸದಮನೆ ಅನಾಥಾಶ್ರಮಕ್ಕೆ ಭೇಟಿ ನೀಡಿದವರ ಅನಿಸಿಕೆಗಳು :

ಹತ್ತು ವರ್ಷಗಳಿಗೂ ಅಧಿಕ ಅವಧಿಯಿಂದ ನಡೆಸಲ್ಪಡುತ್ತಿರುವ ಈ ಸಂಸ್ಥೆಯು ಮಾನವೀಯ ಮೌಲ್ಯಗಳಾಧರಿತದಲ್ಲಿ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ.

ಯೇಸುಕ್ರಿಸ್ತನು ತೋರಿಸಿರುವ ಮಾನವೀಯ ಮೌಲ್ಯಗಳೆಂದರೆ; "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು", "ಬಡವರನ್ನು, ದಿಕ್ಕಿಲ್ಲದವರನ್ನು –ವಿಧವೆಯರನ್ನು –ಮಕ್ಕಳನ್ನು ಪರಾಂಬರಿಸುವುದು" ಇತ್ಯಾದಿಗಳನ್ನು ಈ ಸಂಸ್ಥೆಯು ಕಾರ್ಯರೂಪದಲ್ಲಿ ತಂದಿರುವುದು ಪ್ರಶಂಸನೀಯ!

ಈ ಸಂಸ್ಥೆಯ ಮೂಲ ಸ್ಥಾಪಕರಾದ ಪಾ॥ ಸುನಿಲ್ ಡಿ'ಸೋಜಾ ಹಾಗೂ ಅವರ ಧರ್ಮಪತ್ನಿ ಇವರುಗಳ ಕನಸಿನ ಸಂಸ್ಥೆ ಇದು!! ದೇವರು ಇವರುಗಳನ್ನು ಹಾಗೂ ಈ ಸಂಸ್ಥೆಯ ಇನ್ನಿತರ ಪದಾಧಿಕಾರಿಗಳನ್ನು ಹೇರಳವಾಗಿ ಆಶೀರ್ವದಿಸಲಿ. ಇವರ ಮಕ್ಕಳಿಗೂ ವಿಶೇಷವಾದ ಆಶೀರ್ವಾದಗಳನ್ನು, ವಿಶೇಷವಾದ ಜ್ಞಾನವನ್ನು ನಮ್ಮ ರಕ್ಷಕನಾದ ಯೇಸುಕ್ರಿಸ್ತನು ದಯಪಾಲಿಸಲೆಂಬ ಪ್ರಾರ್ಥನೆ ನನ್ನದಾಗಿದೆ.

ದೇವರು ನಿಮ್ಮೆಲರೊಂದಿಗೆ ಇರಲಿ.

– ಡೇವಿಡ್ ಸಿಮೆಯೋನ್
ಮಾಜಿ ಸಭಾಪತಿ, ಕರ್ನಾಟಕ ವಿಧಾನ ಪರಿಷತ್ತು.

---

**ವಿಶೇಷ ಸೂಚನೆ**

'ವಿಶ್ವಾಸದ ಮನೆ' ಕೇವಲ ರಸ್ತೆ ಬದಿಯಲ್ಲಿರುವ ನಿರ್ಗತಿಕರು ಹಾಗೂ ಅನಾಥರಿಗೆ ಮಾತ್ರ ಸೀಮಿತವಾಗಿರುತ್ತದೆ ಹೊರತು ಮನೆಯಲ್ಲಿರುವ ವ್ಯಕ್ತಿಗಳಿಗಲ್ಲ. ಯಾವುದೇ ವ್ಯಕ್ತಿಗಳು ಸಂಘ, ಸಂಘಟನೆಗಳ ಅಥವಾ ಇನ್ನಾವುದೇ ಪ್ರಭಾವಿ ವ್ಯಕ್ತಿಗಳ ಮೂಲಕ 'ವಿಶ್ವಾಸದ ಮನೆ'ಗೆ ಒತ್ತಡ ಅಥವಾ ಪ್ರಭಾವ ಬೀರುವುದು ಸೂಕ್ತವಲ್ಲ. ಇಂತಹ ಒತ್ತಡ ಮತ್ತು ಪ್ರಭಾವವನ್ನು 'ವಿಶ್ವಾಸದ ಮನೆ'ಯಾಗಲೀ ಆಡಳಿತ ಮಂಡಳಿಯಾಗಲೀ ಪ್ರೋತ್ಸಾಹಿಸುವುದಿಲ್ಲ. ದಯವಿಟ್ಟು ಈ ವಿಷಯದಲ್ಲಿ ನಿಮ್ಮ ಸಹಕಾರವನ್ನು ನಮಗೆ ಕೊಡಬೇಕಾಗಿ ಈ ಮೂಲಕ ಕೇಳಿಕೊಳ್ಳುತ್ತೇವೆ.

– ವಿಶ್ವಾಸದ ಮನೆಯ ಆಡಳಿತ ಮಂಡಳಿ

**ಯೆಹೋವನೇ ನನ್ನ ಪಾಲು, ಆದಕಾರಣ ಆತನನ್ನು ನಿರೀಕ್ಷಿಸುವೆನು ಎಂದು ನನ್ನ ಅಂತರಾತ್ಮವು ಅಂದುಕೊಳ್ಳುತ್ತದೆ (ಪ್ರಲಾ. 3:24).**

# ದಾಲ್ಚೀನಿ ಸುಗಂಧಭರಿತ ಔಷಧಿ

ಆರೋಗ್ಯ ಸ್ವರ

ದಾಲ್ಚಿನಿ ಅಥವಾ ಚಕ್ಕೆ ಎಂದು ಕನ್ನಡದಲ್ಲಿ ಕರೆಯುವ 'ಸಿನ್ನಾಮೊನ್ ಝ್ಯೆಲ್ಯಾನಿಕಮ್' ಎಂಬ ವೈಜ್ಞಾನಿಕ ಹೆಸರು ಹೊಂದಿರುವ ಈ ಪರಿಮಳಯುಕ್ತ ಮೂಲಿಕಾದ್ರವ್ಯ, ಸಾಂಬಾರು ದಿನಿಸಿನ ರೂಪದಲ್ಲಿ ಅಡುಗೆ ಮನೆಯಲ್ಲಿ ನಿತ್ಯೋಪಯೋಗಿ ಮಾತ್ರವಲ್ಲ, ಔಷಧೀಯವಾಗಿಯೂ ಬಹೂಪಯೋಗಿ.

ದಾಲ್ಚೀನಿಯ ಔಷಧೀಯ ಗುಣಗಳನ್ನು ಅರಿಯೋಣ. 20–25 ಅಡಿ ಎತ್ತರ ಬೆಳೆಯುವ ದಾಲ್ಚೀನಿ (ತಮೂಲ) ವೃಕ್ಷದ ತೊಗಟೆ 5 ಮಿ. ಮೀ. ನಷ್ಟು ದಪ್ಪವಾಗಿರುತ್ತದೆ. ದಾಲ್ಚೀನಿ ಅಥವಾ ಚಕ್ಕೆ ಎಂಬ ಈ ಮರದ ತೊಗಟೆಯಲ್ಲಿ ಒಂದು ಪ್ರತಿಶತದಷ್ಟು ತೈಲಾಂಶವಿದ್ದು 'ಸಿನ್ನಾಮುಲ್ಡಿಹೈಡ್' ಹಾಗೂ 'ಯುಜೆನಾಲ್' ಎಂಬ ಅಂಶವನ್ನು ಹೊಂದಿದೆ. ಇದರ ಎಲೆಯಲ್ಲೂ 'ಯುಜೆನಾಲ್' ಅಂಶವಿದೆ.

* ದಾಲ್ಚೀನಿಯನ್ನು 4 ಚಿಟಿಕೆಯಷ್ಟು ರಾತ್ರಿ ನೀರಿನಲ್ಲಿ ಹಾಕಿಟ್ಟು ಮರುದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ದೇಹದ ಕೊಲೆಸ್ಟರಾಲ್ ಅಂಶ ಕಡಿಮೆಯಾಗುತ್ತದೆ.
* ಕೆಮ್ಮು ಕಫವಿರುವಾಗ ಒಂದು ಚಮಚ ದಾಲ್ಚೀನಿ ಹುಡಿಗೆ 2 ಚಮಚ ಜೇನು ಬೆರೆಸಿ ಸೇವಿಸಿದರೆ ಕೆಮ್ಮು ಕಫ ಶಮನವಾಗುತ್ತದೆ.
* ಬೆಚ್ಚಗಿನ ನೀರಿಗೆ 4 ಚಮಚ ಕಾಳುಮೆಣಸಿನ ಹುಡಿ, 1 ಚಮಚ ದಾಲ್ಚೀನಿ ಹುಡಿ, ಸ್ವಲ್ಪ ಕಲ್ಲುಸಕ್ಕರೆ ಬೆರೆಸಿ ಸೇವಿಸಿದರೆ ಕೆಮ್ಮು ದೀರ್ಘಕಾಲೀನ ನೆಗಡಿ ಶಮನವಾಗುತ್ತದೆ.
* ಕ್ಷಯರೋಗಿಗಳಲ್ಲಿ ಇತರ ಔಷಧಗಳ ಜೊತೆಗೆ ನಿತ್ಯವೂ 1/2 ಚಮಚ ದಾಲ್ಚೀನಿ ಹುಡಿ ಹಾಗೂ 1 ಚಮಚ ಜೇನು ಬೆರೆಸಿ ಸೇವಿಸಿದರೆ ಪರಿಣಾಮಕಾರಿ.
* ದಾಲ್ಚೀನಿಯನ್ನು ನೀರಿನಲ್ಲಿ ತೇದಿ ಕಣ್ಣಿಗೆ ಕಾಡಿಗೆಯಂತೆ ಲೇಪಿಸಿದರೆ ದೃಷ್ಟಿದೋಷ ನಿವಾರಣೆಯಾಗಿ ಕಣ್ಣು ಸ್ಫುಟವಾಗುತ್ತದೆ.
* ದಾಲ್ಚೀನಿ ಮರದ ಎಲೆ ಅಥವಾ ತಮೂಲ ಪತ್ರವನ್ನು ಮಡಚಿ ನಿತ್ಯವೂ ಹಲ್ಲುಗಳಿಗೆ ತಿಕ್ಕಿದರೆ ಹಲ್ಲುಗಳು ಮತ್ತು ಒಸಡುಗಳು ಗಟ್ಟಿಯಾಗುತ್ತವೆ.
* ದಾಲ್ಚೀನಿಯನ್ನು ಬಿಸಿನೀರಿನಲ್ಲಿ ತೇದಿ ಹಣೆಗೆ ಪಟ್ಟು ಹಾಕುವುದರಿಂದ ತಲೆನೋವು ಶಮನವಾಗುತ್ತದೆ.
* ದಾಲ್ಚೀನಿ ಹುಡಿ ಹಾಗೂ ಜೇನು ಬೆರೆಸಿ ಸಂಧಿಶೂಲ ಇರುವ ಭಾಗದಲ್ಲಿ ಲೇಪಿಸಿದರೆ ನೋವು ಶಮನವಾಗುತ್ತದೆ. ಅಂತೆಯೇ 1 ಕಪ್ ನೀರಿನಲ್ಲಿ 1 ಚಮಚ ದಾಲ್ಚೀನಿ ಹುಡಿ, 2 ಚಮಚ ಜೇನು ಬೆರೆಸಿ ನಿತ್ಯ ಸೇವಿಸಿದರೂ ಸಂಧಿಶೂಲ ಶಮನವಾಗುತ್ತದೆ.
* ಹಲ್ಲುನೋವು ಇರುವಾಗ ಹತ್ತಿಯನ್ನು ದಾಲ್ಚೀನಿ ಹುಡಿಯಲ್ಲಿ ಅದ್ದಿ ನೋವಿರುವಲ್ಲಿ ಇಟ್ಟರೆ ನೋವು ಶಮನವಾಗುತ್ತದೆ.
* ಕೊಲೆಸ್ಟರಾಲ್ ಮತ್ತು ಬೊಜ್ಜು ಕರಗಿಸಲು 1 ಕಪ್ ನೀರಿಗೆ 2 ಚಮಚ ಜೇನು, 3 ಚಮಚ ದಾಲ್ಚೀನಿ ಹುಡಿ ಬೆರೆಸಿ ಸೇವಿಸಿದರೆ ಹಿತಕಾರಿ.
* ಋತುಸ್ರಾವ ಅಧಿಕವಿರುವಾಗ ಮಹಿಳೆಯರಲ್ಲಿ ದಾಲ್ಚೀನಿಯ ಪುಡಿಯ ಕಷಾಯ ಸೇವಿಸಿದರೆ ಅಧಿಕ ಸ್ರಾವ ಕಡಿಮೆಯಾಗುತ್ತದೆ.
* ಹೊಟ್ಟೆನೋವು, ಹೊಟ್ಟೆಯುಬ್ಬರ, ಭೇದಿ ಇರುವಾಗ 1 ಚಮಚ ದಾಲ್ಚೀನಿ ಪುಡಿಯನ್ನು, 1 ಚಮಚ ಜೇನಿನೊಂದಿಗೆ ಬೆರೆಸಿ ದಿನಕ್ಕೆ 2–3 ಬಾರಿ ಸೇವಿಸಲು ನೀಡಿದರೆ ಶಮನಕಾರಿ.
* 10 ಗ್ರಾಂ ದಾಲ್ಚೀನಿ ಹುಡಿ ಬೆರೆಸಿ ಕಷಾಯ ಮಾಡಿ ಸೇವಿಸಿದರೆ ವಾಕರಿಕೆ ವಾಂತಿ ಶಮನವಾಗುತ್ತದೆ.
* ದಾಲ್ಚೀನಿ ಹಾಗೂ ಲವಂಗದ ಹುಡಿ ಬೆರೆಸಿ ಕಷಾಯ ಮಾಡಿ ಸೇವಿಸಿದರೆ ವಾಂತಿ ಶಮನವಾಗುತ್ತದೆ.
* ಶುಂಠಿ ಹುಡಿ 4 ಚಿಟಿಕೆ, ಯಾಲಕ್ಕಿ ಹುಡಿ 4 ಚಿಟಿಕೆ, ದಾಲ್ಚೀನಿ ಹುಡಿ 4 ಚಿಟಿಕೆ ಇವನ್ನು ಅರೆದು ಬೆರೆಸಿ ದಿನಕ್ಕೆ 2–3 ಬಾರಿ ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಹಸಿವು, ಪಚನಶಕ್ತಿ ವರ್ಧಿಸುತ್ತದೆ ಹಾಗೂ ಮಲಬದ್ಧತೆ ನಿವಾರಕವೂ ಹೌದು.
* ಕಜ್ಜಿ, ತುರಿಕೆ, ಗಜಕರ್ಣ ಮುಂತಾದವುಗಳಿಗೆ ಜೇನು ಮತ್ತು ದಾಲ್ಚೀನಿ ಹುಡಿಯ ಮಿಶ್ರಣ ಬೆರೆಸಿ ಲೇಪಿಸಿದರೆ ಗುಣಕಾರಿ.
* ಸಾಂಕ್ರಾಮಿಕ ಬಗೆಯ ಜ್ವರವಿರುವಾಗ 1 ಚಮಚ, ದಾಲ್ಚೀನಿ ಹುಡಿಗೆ 1 ಚಮಚ ಜೇನು ಬೆರೆಸಿ ನಿತ್ಯ 3 ಬಾರಿ ಸೇವಿಸಿದರೆ ಜ್ವರ ಪರಿಹಾರವಾಗುತ್ತದೆ.

ಸೂಚನೆ :– ದಾಲ್ಚೀನಿ ಹುಡಿ ಅಧಿಕ ಸೇವಿಸಿದರೆ ಪಿತ್ತ ಪ್ರಕೃತಿಯ ವ್ಯಕ್ತಿಗಳಲ್ಲಿ ತಲೆನೋವು ಉಂಟಾಗುತ್ತದೆ. ಇದಕ್ಕೆ ಶಮನಕಾರಿಯಾಗಿ ಶ್ರೀಗಂಧವನ್ನು ತೇದಿ ಸೇವಿಸಿದರೆ ಇದು ಪ್ರತ್ಯೌಷಧಿಯಂತೆ ಕಾರ್ಯವೆಸಗುತ್ತದೆ. ಗರ್ಭಿಣಿ ಸ್ತ್ರೀಯರಿಗೆ ಉಷ್ಣತೀಕ್ಷ್ಣಗುಣ ಹೊಂದಿರುವುದರಿಂದ ದಾಲ್ಚೀನಿ ಸೇವನೆ ಹಿತಕರವಲ್ಲ.

– ಸಂಗ್ರಹ.

ಕರ್ತನು ಸದಾಕಾಲಕ್ಕೂ ಬಿಟ್ಟುಬಿಡುವವನಲ್ಲ

(ಪ್ರಲಾ. 3:31).

## ಸಾಕ್ಷಿಯ ಸ್ವರ

* ನನಗೆ ತುಂಬಾ ಸಮಯದಿಂದ ಹೊಟ್ಟೆನೋವು ಮತ್ತು ಹೊಟ್ಟೆಯೊಳಗೆ ಗಡ್ಡೆ ಇತ್ತು. ನಾನು 3ನೇ ಕೇರಿತ್ ಕೂಟದಲ್ಲಿ ಪಾಲ್ಗೊಂಡು, 6ನೇ ದಿನದಲ್ಲಿ ಸಂಪೂರ್ಣ ಗುಣವಾದೆ. ತಲೆ ನೋವಿನಿಂದ ಕೂಡಾ ಪರಿಪೂರ್ಣ ಬಿಡುಗಡೆ ಸಿಕ್ಕಿತು. ಯೇಸುಕ್ರಿಸ್ತನು ನನ್ನನ್ನು ಸಂಪೂರ್ಣ ಗುಣಪಡಿಸಿದ್ದಾನೆ. ಕರ್ತನ ನಾಮಕ್ಕೆ ಸ್ತೋತ್ರವಾಗಲಿ.




– **ಜಯಂತ್ ಜಾವಳ್ಳಿ,** 6ನೇ ತರಗತಿ, ಮಡಿಕೇರಿ

* ನಾನು 3ನೇ ಕೇರಿತ್‌ಗೆ ಬಂದ ಮೊದಲ ದಿನದಿಂದ ಕ್ರಿಸ್ತನಲ್ಲಿ ಬೆಳೆಯಲು ಪ್ರಾರಂಭಿಸಿದೆ. ಹೀಗೆ ನನ್ನ ಜೀವಿತದಲ್ಲಿ ಮಾನಸಾಂತರ ಹುಟ್ಟಿತು. ನನಗೆ ಚರ್ಮದ ಅಲರ್ಜಿ ಮತ್ತು ಕೈ ನೋವು ಇತ್ತು. ನನಗೆ ಇದರಿಂದ ಸಂಪೂರ್ಣ ಗುಣವಾಯಿತು ಮತ್ತು ಸಮಾಧಾನ ಸಿಕ್ಕಿತು. ನಾನು ಅನ್ಯಭಾಷೆಯ ವರವನ್ನು ಹೊಂದಿಕೊಂಡೆ. ನನ್ನ ಜೀವಿತದಲ್ಲಿ ಆದ ಅದ್ಭುತವನ್ನು ಅನೇಕರಿಗೆ ತಿಳಿಸಬೇಕೆಂದಿದ್ದೇನೆ. ಕರ್ತನ ನಾಮಕ್ಕೆ ಸ್ತೋತ್ರವಾಗಲಿ.



– **ಭವ್ಯ ಪಿ. ಜಿ.,** ಮಂಗಳೂರು

* 3ನೇ ಕೇರಿತ್ ಕೂಟಕ್ಕೆ ಬರುವಾಗ ನನ್ನ ದಾಂಪತ್ಯ ಜೀವಿತದಲ್ಲಿ ತೊಂದರೆ ಇತ್ತು. ಪದೇ ಪದೇ ಫಿಡ್ಸ್ ಬಂದು ಬೀಳುತ್ತಿದ್ದೆ. ಈ ಕೂಟವನ್ನು ಪಾಲ್ಗೊಂಡ ನಂತರ ಕರ್ತನಾದ ಯೇಸು ಕ್ರಿಸ್ತನು ನನ್ನ ದಾಂಪತ್ಯ ಜೀವಿತವನ್ನು ಸರಿಪಡಿಸಿ, ಫಿಡ್ಸ್ ರೋಗದಿಂದ ಸಂಪೂರ್ಣ ಗುಣಪಡಿಸಿದ್ದಾನೆ. ನಾನು ಅನ್ಯಭಾಷೆಯ ವರವನ್ನು ಹೊಂದಿಕೊಂಡೆ. ವಾಕ್ಯದ ಗೂಡಾರ್ಥ ನನಗೆ ತಿಳಿಯಲು ಸಹಾಯವಾಯಿತು.



– **ಜಾನ್ಸನ್ ಸಂತೋಷ್,** ಮಂಗಳೂರು

* ನನ್ನ ಶರೀರದಲ್ಲೆಲ್ಲಾ ತುಂಬಾ ನೋವು ಇತ್ತು. ನನಗೆ ಕೈ ಮೇಲೆ ಎತ್ತಲು, ಕುತ್ತಿಗೆ ತಿರುಗಿಸಲು ಆಗುತ್ತಿರಲಿಲ್ಲ. ತಲೆನೋವು, ಬಲಹೀನತೆ ನನ್ನ ಶರೀರದಲ್ಲಿ ಇತ್ತು. ಈಗ ನಾನು ಸಂಪೂರ್ಣ ಗುಣವಾಗಿದ್ದೇನೆ ಮತ್ತು ತುಂಬಾ ಸಂತೋಷವಾಗಿದ್ದೇನೆ. ಕರ್ತನಾದ ಯೇಸು ಕ್ರಿಸ್ತನನ್ನು ಸ್ವಂತ ರಕ್ಷಕನಾಗಿ ಅಂಗೀಕರಿಸಿದೆ. ಯೇಸು ಕ್ರಿಸ್ತನು ನಿಜ ಮತ್ತು ಸತ್ಯ ದೇವರು ಎಂದು ತಿಳಿದುಕೊಂಡೆ. ಕರ್ತನ ನಾಮಕ್ಕೆ ಸ್ತೋತ್ರವಾಗಲಿ.



– **ತಂಗಮ್ಮ,** ಮಡಿಕೇರಿ

* ನಾನು ದುರಾತ್ಮ ಪೀಡಿತನಾಗಿದ್ದೆ. 3ನೇ ಕೇರಿತ್ ಕೂಟದಲ್ಲಿ ನಾನು ಸಂಪೂರ್ಣ ಗುಣಹೊಂದಿದೆ ಮತ್ತು ಅನ್ಯಭಾಷೆವರವನ್ನು ಹೊಂದಿಕೊಂಡೆ. ಕರ್ತನು ಮಾಡಿದ ಉಪಕಾರಕ್ಕಾಗಿ ಕರ್ತನ ನಾಮಕ್ಕೆ ಸ್ತೋತ್ರವಾಗಲಿ.



– **ಜೋಯೆಲ್,** ಬೆಳ್ತಂಗಡಿ


## ಜಾಹಿರಾತು

**"ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. ನಾನು ಹಸಿದಿದ್ದೆನು, ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು, ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು, ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು, ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು, ನನ್ನನ್ನು ಆರೈಕೆ ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು, ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು" (ಮತ್ತಾ. 25:34–36).**

**ಪ್ರತಿ ತಿಂಗಳು ವಿಶ್ವಾಸದಮನೆ ಅನಾಥಾಶ್ರಮಕ್ಕೆ ಅಕ್ಕಿ 25 ಕಿಲೋ. ದಿಂದ ಎಷ್ಟು ಸಾಧ್ಯವಿರುತ್ತದೋ ಅಷ್ಟು. ಅಕ್ಕಿಯನ್ನು ಕೊಡಬಯಸುವವರು ನಮಗೆ ಬೇಕಾಗಿದ್ದಾರೆ. ನೀವು ಕೊಡುವ ಅಕ್ಕಿಯಲ್ಲಿ ಕೆಲವರು ಊಟಮಾಡಿ ತೃಪ್ತರಾದಾಗ ಕರ್ತನು ಪರಲೋಕದಿಂದ ನಿಮ್ಮನ್ನು ಆಶೀರ್ವಾದ ಮಾಡುತ್ತಾನೆ.**


**ಕರ್ತನ ಆತ್ಮನು ಯಾರಲ್ಲಿದ್ದಾನೋ ಅವರಿಗೆ ಬಿಡುಗಡೆ ಉಂಟು**

**(2 ಕೊರಿ. 3:18).**

# ನೀತಿವಂತನ ಆಶೀರ್ವಾದಗಳು

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಧರ್ಮವು ಯಥಾರ್ಥವಂತರನ್ನು ಉದ್ಧರಿಸುತ್ತದೆ. ನಾವು ಯಥಾರ್ಥವಂತರಾದರೆ ಧರ್ಮವು ನಮ್ಮನ್ನು ಉದ್ಧರಿಸುವಂತದ್ದಾಗಿದೆ.

7) **"ಶಿಷ್ಟನು ಇಕ್ಕಟ್ಟಿನಿಂದ ಪಾರಾಗುವನು; ದುಷ್ಟನು ಅವನಿಗೆ ಬದಲಾಗಿ ಅದರಲ್ಲಿ ಬೀಳುವನು"** (ಜ್ಞಾನೋ. 11:8). ನೀತಿವಂತನ ಇನ್ನೊಂದು ಆಶೀರ್ವಾದ ಇಕ್ಕಟ್ಟಿನಿಂದ ಪಾರಾಗುವಂತದ್ದು. ಕೀರ್ತ. 34:19 ರಲ್ಲಿ **ನೀತಿವಂತನಿಗೆ ಸಂಭವಿಸುವ ಕಷ್ಟಗಳು ಅನೇಕವಿದ್ದರೂ ಯೆಹೋವನು ಅವೆಲ್ಲವುಗಳಿಂದ ಬಿಡಿಸುತ್ತಾನೆ.** ಲೋಕದಲ್ಲಿ ಮನುಷ್ಯನು ಜೀವಿಸುವಾಗ ಅನೇಕ ವಿಧವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅದರಲ್ಲಿ ನೀತಿವಂತನು (ಯೇಸುವಿನ ರಕ್ತದಲ್ಲಿ ತೊಳೆಯಲ್ಪಟ್ಟು ಯೇಸುವನ್ನು ರಕ್ಷಕನು ಒಡೆಯನೆಂದು ಅಂಗೀಕಾರ ಮಾಡಿಕೊಂಡನು) ಎಷ್ಟೇ ಕಷ್ಟ ಸಮಸ್ಯೆಗಳು ಬಂದರೂ ನಿರೀಕ್ಷೆ ಇರುವುದರಿಂದ ಕರ್ತನು ಎಲ್ಲವುಗಳಿಂದ ಬಿಡುಗಡೆ ಮಾಡುತ್ತಾನೆ. 1 ಕೊರಿ. 10:13 ಮನುಷ್ಯನು ಸಹಿಸಬಹುದಾದ ಶೋಧನೆಯೇ ಹೊರತು ಬೇರೆ ಯಾವುದು ನಿಮಗೆ ಸಂಭವಿಸಲಿಲ್ಲ. ದೇವರು ನಂಬಿಗಸ್ತನು ನಿಮ್ಮ ಶಕ್ತಿಯನ್ನು ಮೀರುವ ಶೋಧನೆಯನ್ನು ನಿಮಗೆ ಬರಗೊಡಿಸದೆ ನೀವು ಅದನ್ನು ಸಹಿಸುವುದಕ್ಕೆ ಶಕ್ತರಾಗುವಂತೆ ಶೋಧನೆಯಾಗುತ್ತಲೇ ತಪ್ಪಿಸಿಕೊಳ್ಳುವ ಮಾರ್ಗವನ್ನು ಸಿದ್ಧಮಾಡುವನು.

**ಒಬ್ಬ ನೀತಿವಂತನು 2 ವಿಧವಾದ ಸಂಗತಿಗಳನ್ನು ಎದುರಿಸಬೇಕು**

**1) ಪರೀಕ್ಷೆ 2) ಶೋಧನೆ**

**1) ಪರೀಕ್ಷೆ ದೇವರಿಂದ ಬರುತ್ತದೆ :** ಇನ್ನೊಂದು ಮೇಲಿನ ಹಂತಕ್ಕೆ ಹೋಗುವುದಕ್ಕಾಗಿ ಉನ್ನತವಾದ ಇನ್ನೊಂದು ಜವಾಬ್ದಾರಿಯನ್ನು ಅಥವಾ ಉನ್ನತವಾದ ಇನ್ನೊಂದು ಆಶೀರ್ವಾದವನ್ನು ಕರ್ತನು ಕೊಡುವುದಕ್ಕೆ ಮುಂಚೆ ಕರ್ತನು ನಮ್ಮ ಸ್ವಭಾವವನ್ನು, ಗುಣಗಳನ್ನು, ನಡತೆಯನ್ನು, ಯೋಚನೆಗಳನ್ನು, ಮನೋಭಾವವನ್ನು ಪರೀಕ್ಷಿಸುತ್ತಾನೆ. ಇವೆಲ್ಲದರಲ್ಲಿ ನಾವು ಜಯ ಹೊಂದಿದರೆ ಉನ್ನತವಾದ ಅನುಗ್ರಹಕ್ಕೆ ಪಾತ್ರರಾಗುತ್ತೇವೆ. 1 ಕೊರಿ. 2:9 ರಲ್ಲಿ "ಆದರೆ ಬರೆದಿರುವ ಪ್ರಕಾರ ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ". **"ಸದ್ಭಕ್ತರಿಗೋಸ್ಕರ ನೀನು ಇಟ್ಟುಕೊಂಡಿರುವ ಮೇಲೂ ಆಶ್ರಿತರಿಗೋಸ್ಕರ ನೀನು ಎಲ್ಲರ ಮುಂದೆ ಮಾಡಿದ ಉಪಕಾರಗಳೂ ಎಷ್ಟೋ ವಿಶೇಷವಾಗಿವೆ"** (ಕೀರ್ತ. 31:19). ದೇವರು ತನ್ನ ಮಕ್ಕಳಾದ ನೀತಿವಂತರಿಗಾಗಿ ಅನೇಕ ಆಶೀರ್ವಾದಗಳನ್ನು ಇಟ್ಟುಕೊಂಡಿರುತ್ತಾನೆ. ಸಮಯ ಬರುವಾಗ ಅವರ ಜೀವಿತದಲ್ಲಿ ಅವುಗಳನ್ನು ಅನುಗ್ರಹಿಸುತ್ತಾನೆ. ಆದರೆ ಅದಕ್ಕೆ ಮುಂಚೆ ನಮ್ಮನ್ನು ಪರೀಕ್ಷಿಸುತ್ತಾನೆ. ಕರ್ತನು ಅಬ್ರಹಾಮನಿಗೆ ಅನೇಕ ವಾಗ್ದಾನಗಳನ್ನು ಮಾಡಬೇಕಾಗಿತ್ತು. ದೇವರ ಒಂದು ವಿಶೇಷತೆ ಏನೆಂದರೆ ದೇವರು ಏನು ಹೇಳುತ್ತಾನೋ ಅದನ್ನು ಆತನು ನೆರವೇರಿಸುತ್ತಾನೆ. (ಅರಣ್ಯ. 23:19, 1 ಸಮು. 15:29, 1 ಅರಸು. 8:15,24,56, 2 ಪೂರ್ವ. 6:15). ದೇವರು ತನ್ನ ದಾಸನಾದ ಅಬ್ರಹಾಮನಿಗೆ ಉನ್ನತವಾದ ಆಶೀರ್ವಾದಕೊಡುವುದಕ್ಕೆ ಮುಂಚೆ ಆತನನ್ನು ಪರೀಕ್ಷಿಸಬೇಕಾಗಿತ್ತು. ಅದಕ್ಕಾಗಿ ಆದಿ. 22:1 ರಲ್ಲಿ ಈ ಸಂಗತಿಗಳು ಆದ ಮೇಲೆ ದೇವರು ಅಬ್ರಹಾಮನನ್ನು ಪರಿಶೋಧಿಸಿದನು. ಹೇಗೆಂದರೆ ಆತನು ಅವನನ್ನು ಅಬ್ರಹಾಮನೇ ಎಂದು ಕರೆಯಲು ಅವನು ಇಗೋ ಇದ್ದೇನೆ ಅಂದನು. ಅಬ್ರಹಾಮನ ಪರೀಕ್ಷೆ ಅತೀ ಪ್ರಾಮುಖ್ಯವಾಗಿತ್ತು. ಪ್ರಿಯರೇ, ದೇವರು ನಿಮ್ಮ ಜೀವಿತದಲ್ಲಿ ಉನ್ನತವಾದ ಆಶೀರ್ವಾದವನ್ನು ಅನುಗ್ರಹಿಸುವುದಕ್ಕೆ ಮುಂಚೆ ಒಂದು ಪರೀಕ್ಷೆಗೆ ನಿಮ್ಮನ್ನು ಒಳಪಡಿಸುತ್ತಾನೆ. ಅದು ನಿಮ್ಮ ಜೀವಿತದಲ್ಲಿ ಕೆಲವು ಕಷ್ಟ ನಷ್ಟಗಳನ್ನು ಅನುಮತಿಸಿ ನಿಮ್ಮ, ಸ್ವಭಾವ, ಗುಣಗಳನ್ನು ಪರೀಕ್ಷಿಸಬಹುದು.

**10 ಸಂಗತಿಗಳನ್ನು ನೀವು ಗಮನಿಸಬೇಕು :** 1) ನಿಮ್ಮ ಜೀವಿತದಲ್ಲಿ ಸಂಭವಿಸುವ ಎಲ್ಲಾ ಸಂಗತಿಗಳು ದೇವರಿಗೆ ತಿಳಿದಿವೆ ಮತ್ತು ಅದನ್ನು ನಿಮ್ಮ ಒಳ್ಳೇದಕ್ಕಾಗಿಯೇ ಅನುಮತಿಸುತ್ತಾನೆಂದು ಮರೆಯಬಾರದು. ರೋಮ. 8:28 **ಇದಲ್ಲದೆ ದೇವರ ಸಂಕಲ್ಪದ ಮೇರೆಗೆ ಕರೆಯಲ್ಪಟ್ಟು ಆತನನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು ಅನುಕೂಲವಾಗುತ್ತವೆ ಎಂದು ನಮಗೆ ಗೊತ್ತದೆ.** ನನ್ನ

**ನೀನೇ ನನಗೆ ಮರೆಯು, ನಿರಪಾಯವಾಗಿ ನನ್ನನ್ನು ಕಾಯುವಿ; ವಿಮೋಚನ ಧ್ವನಿಯಿಂದ ನನ್ನನ್ನು ಆವರಿಸಿಕೊಳ್ಳುತ್ತೀ (ಕೀರ್ತ. 32:7).**

ಜೀವಿತದಲ್ಲಿ ಇತ್ತೀಚೆಗೆ ಸಂಭವಿಸಿದ ಕೆಲವು ಸಂಗತಿಗಳನ್ನು ಸಾಕ್ಷಿಯ ರೂಪದಲ್ಲಿ ಹಂಚಲು ಬಯಸುತ್ತೇನೆ. ನಮ್ಮ ಹತ್ತಿರದ ಊರಿನಲ್ಲಿ ಕಳೆದ ಕೆಲವು ವರ್ಷಗಳಿಂದ ಒಂದು ಮನೆಯಲ್ಲಿ ದರ್ಶನ ಇಟ್ಟು ಸೇವೆ ಆರಂಭಿಸಿದ್ದೇವು ಪ್ರತಿ ಭಾನುವಾರ ಸಂಜೆ ಅಲ್ಲಿಗೆ ನಾವು ಹೋಗಿ ಸೇವೆ ಮಾಡುತ್ತಿದ್ದೇವು. ಅನೇಕರು ಬಂದು ಅಲ್ಲಿ ದೇವರ ವಾಕ್ಯ ಕೇಳಿ ಆಶೀರ್ವಾದವನ್ನು ಹೊಂದುತ್ತಿದ್ದರು. ಅಲ್ಲಿ ನಮಗೊಂದು ಸಭೆ ಮತ್ತು ಸೇವೆಯ ಕುರಿತು ದರ್ಶನವಿತ್ತು. ಜ್ಞಾನೋ. 29:18 **ದೇವದರ್ಶಕರು ಇಲ್ಲದಿರುವಲ್ಲಿ ಜನರು ಅಂಕೆ ಮೀರಿ ನಡೆಯುವರು.** ನಮ್ಮ ಒಬ್ಬ ಸಂಬಂಧಿಕರು ಆಗಾಗ ನಮ್ಮ ಮನೆಗೆ ಬರುತ್ತಿದ್ದರು (ಅವರು ಸುವಾರ್ತಿಕರಾಗಿದ್ದರು) ಅವರಿಗೆ ದೇವರ ವಾಕ್ಯ ಹೇಳಲು ಅವಕಾಶವನ್ನು ನಾವು ಕೊಡುತ್ತಿದ್ದೇವು. ಅವರು ನಮ್ಮ ಸೇವೆಯಲ್ಲಿ ಇರುವ ನಿಮಿತ್ತ ನಾನು ಅವರಿಗೆ ಅನೇಕ ಬಾರಿ ಕೇಳಿಕೊಂಡಿದ್ದೆ ಎಲ್ಲಿಯಾದರೂ ಸಭಾಸೇವೆ ಮಾಡುತ್ತೀರಾ ಎಂದು ಅವರು ನನಗೆ ಸಭಾಪಾಲಕನ ಕರೆ ಇಲ್ಲ, ನಾನು ಸುವಾರ್ತಿಕನಾದ್ದರಿಂದ ಅದೇ ಸೇವೆಯನ್ನು ಮಾಡುತ್ತೇನೆಂದು ಉತ್ತರಿಸುತ್ತಿದ್ದರು. ಯಾವಗಲಾದರೂ ಅವರು ಬಂದಾಗ ನಾವು ಸೇವೆ ನಡೆಸುವ ಮನೆಯಲ್ಲಿ ಆರಾಧನೆ ನಡೆಸುತ್ತಿದ್ದರು. ನಾನು ಒಂದು ದೇವರ ವಾಕ್ಯ ಹಂಚಲು ಹೋಗಿದ್ದೆ. ಆರಾಧನೆಯ ಮಧ್ಯದಲ್ಲಿ ಈ ರೀತಿ ಅವರು ಪ್ರಕಟಿಸಿದರು. ನನಗೆ ದೇವರ ಆತ್ಮ ಹೇಳುತ್ತಿದ್ದಾನೆ, ಇಲ್ಲಿ ಪ್ರತಿ ತಿಂಗಳು 3 ದಿನಗಳ ಉಪವಾಸ ಪ್ರಾರ್ಥನೆಮಾಡಬೇಕೆಂದು. ಒಂದು ವೇಳೆ ನಿಮ್ಮ ಮನೆಗೆ ಯಾರಾದರೂ ಬಂದು ಮನೆ ಯಜಮಾನನ ಜೊತೆ ಮಾತಾಡದೆ ದೇವರ ಆತ್ಮ ನನಗೆ ಇಲ್ಲಿ ಉಪವಾಸ ಪ್ರಾರ್ಥನೆ ಮಾಡಲು ಹೇಳುತ್ತಿದ್ದಾನೆ ಅಂದರೆ ನಿಮ್ಮ ಪ್ರತಿಕ್ರಿಯೆ ಹೇಗಿರುತ್ತದೆ? (ಸೇವಕರೆ ನಿಮ್ಮ ಸಭೆಗೆ ಯಾವುದೇ ಸೇವಕರನ್ನು ಆಹ್ವಾನಿಸುವಾಗ ಅವರ ಸಾಕ್ಷಿ, ಹಿನ್ನಲೆ, ಸೇವೆ ಬಗ್ಗೆ ಚೆನ್ನಾಗಿ ವಿಚಾರಿಸಿ, ಪ್ರಾರ್ಥಿಸಿ ದೇವರು ಅಪ್ಪಣೆಕೊಟ್ಟರೆ ಮಾತ್ರ ಕರೆಯಿಸಿ ಇಲ್ಲದಿದ್ದರೆ ನೀವು ದು:ಖಪಡಬೇಕಾಗುತ್ತದೆ.) ನನ್ನ ಎದುರೇ ನನ್ನ ಬಳಿ ವಿಚಾರಿಸದೆ, ಹೇಳದೆ ನಾವು ನಡೆಸುವಂತಹ ಸೇವೆಯಲ್ಲಿ ಇವರಿಗೆ ದೇವರಾತ್ಮನು 3 ದಿನ ಉಪವಾಸ ಮಾಡಲು ಹೇಳಿದ್ದಾನೆಂದು ಪ್ರಕಟಿಸುವಾಗ ತುಂಬಾ ಬೇಸರವಾಯಿತು. (ಅನೇಕ ಜನರು ಇಂಥ ಪ್ರವಾದನೆಗಳನ್ನು ನಂಬಿ ಮೋಸ ಹೋಗುತ್ತಾರೆ. ಅವರಿಗೆ ಸತ್ಯಬೇಡ, ನಿಮ್ಮ ಮನೆಯಲ್ಲಿ ಮಾಟಮಂತ್ರ ಮಾಡಿದ್ದಾರೆ ಅಂಥ ಹೇಳಿದಾಗ ಅಂಥದ್ದನ್ನು ಜನ ಬೇಗ ನಂಬುತ್ತಾರೆ. ಯಾವುದೇ ಸಮಸ್ಯೆ ಇದ್ದರೂ ದೇವರ ಬಳಿ ತೆಗೆದುಕೊಂಡು ಹೋಗುವಾಗ ದೇವರು ಬಿಡಿಸುತ್ತಾನೆ).

ಮುಂದುವರಿಯುವದು.........

**– ಪಾ|| ಸುನಿಲ್ ಜಾನ್ ಡಿ'ಸೋಜಾ.**

---

**ವಿಶ್ವಾಸದ ಮನೆ ಅನಾಥಾಶ್ರಮದ ಸೇವೆಯಲ್ಲಿ**
**ನೀವು ಪಾಲುದಾರರಾಗಲು ಬಯಸುವಿರಾ**

1. ಪ್ರಾರ್ಥನೆಯ ಮೂಲಕ ಸಹಾಯ ಮಾಡಬಹುದು.
2. ಆರ್ಥಿಕವಾಗಿ ಸಹಾಯ ನೀಡಬಹುದು
3. ವಸ್ತುಗಳ ರೂಪದಲ್ಲಿ ಸಹಾಯ ನೀಡಬಹುದು.

**ಆರ್ಥಿಕ ಸಹಾಯ ನೀಡಲಿಚ್ಛಿಸುವವರು :**

| | | | |
|---|---|---|---|
| ತಿಂಗಳಿಗೊಮ್ಮೆ | ರೂ. 500/– | ಆರು ತಿಂಗಳಿಗೊಮ್ಮೆ | ರೂ. 6000/– |
| ಮೂರು ತಿಂಗಳಿಗೊಮ್ಮೆ | ರೂ. 2000/– | ವರ್ಷಕ್ಕೊಮ್ಮೆ | ರೂ. 8000/– |

ದಯವಿಟ್ಟು ನಮ್ಮನ್ನು ಸಂಪರ್ಕಿಸಿರಿ ಹಾಗೂ ಅನಾಥರ ಸೇವೆಯಲ್ಲಿ ನಮ್ಮೊಂದಿಗೆ ಕೈ ಜೋಡಿಸಿರಿ.
**ಮೊಬೈಲ್ : 9902334941**

ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ, ಪ್ರೀತಿಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನೂ ಆಗಿದ್ದಾನೆ (ಕೀರ್ತ. 103:4).

# ಪ್ರಾರ್ಥನಾ ಸ್ವರ

ನಿಮ್ಮ ಸಮಸ್ಯೆಗಳಿಗಾಗಿಯೂ, ನಿಮ್ಮ ತೊಂದರೆ ಗಳಿಗಾಗಿಯೂ, ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಿ ಅಥವಾ ಕರೆ ಮಾಡಿ.

ನಮ್ಮ ಪ್ರಾರ್ಥನಾ ವೀರರು ನಿಮಗಾಗಿ ಕಣ್ಣೀರು ಸುರಿಸಿ ಪ್ರಾರ್ಥಿಸುವರು. ದೇವರು ಪ್ರಾರ್ಥನೆಯನ್ನು ಕೇಳಿ ಸದುತ್ತರವನ್ನು ಅನುಗ್ರಹಿಸಿ, ನಿಮ್ಮನ್ನು ನಿಮ್ಮ ಸಮಸ್ಯೆಯಿಂದ ಬಿಡಿಸುವನು.

ನಿಮ್ಮ ಪ್ರಾರ್ಥನಾ ಮನವಿಗಳನ್ನು, ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ನಾವು ಗೋಪ್ಯವಾಗಿ ಇಡುತ್ತೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮ ವಿಶೇಷ ಆಲೋಚಕರು ಉತ್ತರಿಸುತ್ತಾರೆ ಹಾಗೂ ಅದನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. (ಬರಹಗಾರರ ಅನುಮತಿಯ ಮೇರೆಗೆ)

**24 ಗಂಟೆಗಳ ಪ್ರಾರ್ಥನೆಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ : 7760139148**

**ಓದುಗರಿಗೆ ವಿಶೇಷ ಸೂಚನೆ :**

1. ಪ್ರೀತಿಯ ಓದುಗರೆಲ್ಲರಿಗೂ ತಿಳಿಯ ಪಡಿಸುವುದೇನೆಂದರೆ ತಾವುಗಳು ಡಿ.ಡಿ./ಚೆಕ್ಕುಗಳು ಯಾವುದನ್ನು ನಮ್ಮ ಸೇವೆಗೆ ಕಳುಹಿಸಲು ಬಯಸುವುದಾಗಿದ್ದಲ್ಲಿ ದಯಮಾಡಿ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಲು ವಿನಂತಿಸುತ್ತೇವೆ. ಇದಕ್ಕಿಂತ ಮುಂಚೆ ಕೆಲವು ಪತ್ರಗಳು ನಮಗೆ ಸಿಗದೆ ಇರುವ ಕಾರಣ ತಮಗೆಲ್ಲರಿಗೂ ಈ ಸಲಹೆಯನ್ನು ಕೊಡಲು ಬಯಸುತ್ತೇವೆ.
2. ತಮಗೆ ಪ್ರತಿ ತಿಂಗಳು ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ತಲುಪುತ್ತಾ ಇರಬಹುದು. ಆದರೆ ಅದಕ್ಕೆ ವಾರ್ಷಿಕ ದೇಣಿಗೆ ರೂ. 120/-ನ್ನು ಕೊಟ್ಟು ಚಂದಾದಾರರಾಗಿರದಿದ್ದಲ್ಲಿ ದಯಮಾಡಿ ತಮ್ಮ ಪರವಾದ ವಾರ್ಷಿಕ ರೂ. 120/- ಮನಿಯಾರ್ಡರ್ /ಡಿಡಿ ಮೂಲಕ ಕಳುಹಿಸಿ ನಿಮ್ಮ ಹೆಸರನ್ನು ನೋಂದಾಯಿಸಿಕೊಳ್ಳಿ ಹಾಗೂ ನಿಮ್ಮ ವಿಳಾಸವನ್ನು ಮನಿಯಾರ್ಡರ್ ಸಂದೇಶ ಭಾಗದಲ್ಲಿ ಪಿನ್‌ಕೋಡ್ ಸಮೇತ ದಯವಿಟ್ಟು ನಮಗೆ ಬರೆದು ಕಳುಹಿಸಿ.
3. ತಮಗೆ ಪ್ರತಿ ತಿಂಗಳು ಸಮಯಕ್ಕೆ ಸರಿಯಾಗಿ ನಮ್ಮ ದೇವರ ಸ್ವರ ಮಾಸಿಕ ಪತ್ರಿಕೆ ಸಿಗದಿದ್ದಲ್ಲಿ ದಯಮಾಡಿ ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.
4. ಈ ಪತ್ರಿಕೆಯ ಯಾವುದೇ ಸಲಹೆ ಮತ್ತು ಸೂಚನೆಗಳನ್ನು ಕೊಡಬಯಸುವವರು ನಮ್ಮ ವಿಳಾಸಕ್ಕೆ ಬರೆದು ಕಳುಹಿಸಿ.
5. ನಿಮ್ಮ ವಿಳಾಸವು ಬದಲಾವಣೆ ಹೊಂದಿರುವುದಾದರೆ ನಿಮ್ಮ ಈಗಿನ ವಿಳಾಸವನ್ನು ಕಳುಹಿಸಿ ಕೊಡಿರಿ.
6. ನಿಮ್ಮ ವಿಳಾಸಕ್ಕೆ ಎರಡು ಪುಸ್ತಕಗಳು ಬರುತ್ತಿದ್ದರೆ ಅದನ್ನು ನಮ್ಮ ಗಮನಕ್ಕೆ ತರಬೇಕಾಗಿ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ :
ಸಂಪಾದಕರು, ದೇವರ ಸ್ವರ, ಬೇತೇಲ್ ಚರ್ಚ್,
ಯೇಸುಪುರ, ಶಂಕರಪುರ ಪೋಸ್ಟ್, ಉಡುಪಿ - 574 115 ಕರ್ನಾಟಕ, ಭಾರತ.
e: Editor_voiceofgod@hotmail.com
Website : www.divinegen.org www.dgmbethelchurch.org

ನಮ್ಮ ಕಛೇರಿ ವಿಳಾಸ :
ಡಿಜಿಎಂ ಬೇತೇಲ್ ಕಛೇರಿ,
ಬೇತೇಲ್ ಚರ್ಚ್, ಯೇಸುಪುರ, ಶಂಕರಪುರ ಅಂಚೆ, ಉಡುಪಿ – 574115, ಕರ್ನಾಟಕ, ಭಾರತ.
Ph: (0820) 2589070, 200 2781
E-mial: dgmofficial@gmail.com

## ಮಹಿಳೆಯರ ಸ್ವರ

*ಕಳೆದ ಸಂಚಿಕೆಯಿಂದ ಮುಂದುವರಿದಿದೆ.*

ಇಸ್ರಾಯೇಲ್ ಜನರನ್ನು ಕರ್ತನು ಐಗುಪ್ತದ ದಾಸತ್ವದಿಂದ ಬಿಡಿಸಲು ಅನೇಕ ಕಾರಣಗಳಲ್ಲಿ ಒಂದು ಕಾರಣ ಅನ್ಯಜನರ ದುರ್ನಡತೆ. ಆದರೆ ದು:ಖಕರವಾದ ಸಂಗತಿ ಏನೆಂದರೆ ಅದೇ ಅನ್ಯ ಜನರಿಂದ ಮುಂದಿನ ಕಾಲ ಘಟ್ಟದಲ್ಲಿ ಇಸ್ರಾಯೇಲ್ ಜನರು ಅವರ ದುರಾಭ್ಯಾಸಗಳನ್ನು ಕಲಿತು ದೇವದ್ರೋಹಿಗಳಾಗಿ ಮಾರ್ಪಟ್ಟರು. ಅವರು ಅನುಸರಿಸುವಂತಹ ಕರ್ತನಿಗೆ ಹೇಯವಾದಂತಹ ದುರಾಭ್ಯಾಸಗಳನ್ನು ನೋಡೋಣ (ಇಂದು ಅನೇಕ ಕ್ರೈಸ್ತ ವಿಶ್ವಾಸಿಗಳು ಈ ರೀತಿಯ ತಪ್ಪಾದ ಸಂಗತಿಗಳಲ್ಲಿ ಬೀಳುತ್ತಿದ್ದಾರೆ)

1. ಮಾಟಮಂತ್ರಗಳನ್ನು ಮಾಡುವುದು
2. ಕಣಿಕೇಳುವುದು
3. ಶಕುನ ನೋಡುವದು
4. ಸತ್ತವರಲ್ಲಿ ವಿಚಾರಿಸುವವರ ಬಳಿಗೆ ಹೋಗುವುದು
5. ಶರೀರದಲ್ಲಿ ಹಚ್ಚೆ ಚುಚ್ಚಿಸಿಕೊಳ್ಳುವುದು
6. ವ್ಯಭಿಚಾರ ಪಾಪಗಳು
7. ಪ್ರಾಣಿ ಬಲಿಕೊಡುವುದು
8. ದಿನಗಳ ಆಚರಣೆ ನಡೆಸುವುದು
9. ಬಿಟ್ಟು ಬಂದ ಹಿನ್ನಲೆಯ ಹಬ್ಬಗಳನ್ನು ಆಚರಿಸುವುದು
10. ವಾಕ್ಯಕ್ಕೆ ಆಧಾರವಿಲ್ಲದ ತಪ್ಪಾದ ಸಂಗತಿಗಳನ್ನು ಅನುಸರಿಸುವುದು

    ಉದಾ:– ಶಿಶು ದೀಕ್ಷಾಸ್ನಾನ, ದೃಢೀಕರಣ, ವಿವಿಧ ಹಬ್ಬಗಳು, ಸತ್ತವರ ಹಬ್ಬಗಳು, ವಿವಿಧ ಸಂಪ್ರದಾಯ ಆಚರಣೆಗಳು, ಸಂತರ ಹಬ್ಬಗಳು.
11. ಅನ್ಯದೇವತೆಗಳಿಗೆ ಪೂಜೆ ಕೊಡುವುದು
12. ವಿಗ್ರಾಹಾರಾಧನೆ ಮಾಡುವದು
13. ವಿಗ್ರಹಕ್ಕೆ ಸಮರ್ಪಿಸಿದ ಆಹಾರ ಸ್ವೀಕರಿಸುವುದು (ಪ್ರಸಾದ)
14. ಹರಕ್ಕೆ ಮಾಡುವುದು
15. ಮನೆಗಳನ್ನು ಕಟ್ಟುವಾಗ ಅನ್ಯರ ಹಾಗೆ ಪಂಚಲೋಹಗಳನ್ನು ಇಟ್ಟು ಪೂಜೆ ಮಾಡುವುದು
16. ವಾಸ್ತು ನೋಡುವುದು
17. ಅನ್ಯದೇವತೆಗಳ ಪೂಜೆಗಳಿಗೆ ಕಾಣಿಕೆ ಕೊಡುವುದು
18. ವಾರದ ತಿಂಗಳಿನ ಭವಿಷ್ಯ ನೋಡುವುದು
19. ಕ್ರೈಸ್ತ ವಿಶ್ವಾಸಿಗಳ ಮದುವೆ ಸಮಾರಂಭಗಳಾಗಲಿ, ಇನ್ನಾವುದೇ ಸಮಾರಂಭಗಳನ್ನು ಅನ್ಯಜನರಿಗೆ ಇಷ್ಟವಾಗುವ ರೀತಿಯಲ್ಲಿ ಅವರ ಪದ್ಧತಿಯನ್ನು ಅನುಸರಿಸಿ ನಡೆಸುವುದು. (ಉದಾ:– ನಾನು ಒಂದು ಪಟ್ಟಣಕ್ಕೆ ಮದುವೆ ಹೋಗಿದ್ದೆ ಅಲ್ಲಿ ಮದುಮಕ್ಕಳ ಮೇಲೆ ಅಕ್ಕಿಯನ್ನು ಬೀಸಾಡುತ್ತಿದ್ದರು ಇದೇನೆಂದು ಕೇಳಿದ್ದಕ್ಕೆ ಇದು ನಮ್ಮ ಸಂಪ್ರದಾಯ ಎಂದು ಹೇಳಿದರು. (ನಮ್ಮ ಊರಿನಲ್ಲಿ ಒಂದು ಕ್ರೈಸ್ತ ವಿಶ್ವಾಸಿಗಳ ಮದುವೆ ನಡೆಯಿತು ಮದುವೆಗೆ ಬಂದವರು ಇದು ಕ್ರೈಸ್ತ ವಿಶ್ವಾಸಿಯ ಮದುವೆಯಾ? ಅನ್ಯರ ಮದುವೆಯಾ ಎಂದು ಕೇಳಿದರು). ನಾನು 2005ನೇ ಇಸವಿಯಲ್ಲಿ ಕುವೈಟ್‌ಗೆ ಹೋದಾಗ ಒಂದು ಕ್ರೈಸ್ತ ವಿಶ್ವಾಸಿಗಳ ಮದುವೆಗೆ ಹೋಗುವಂತ ಅವಕಾಶ ದೊರೆಯಿತು ಆದರೆ ಅದು ಕ್ರೈಸ್ತ ವಿಶ್ವಾಸಿಗಳ ಮದುವೆಯಾ! ಅನ್ಯರ ಮದುವೆಯಾ ಎಂದು ಒಂದ ಸಲ ಗಲಿಬಿಲಿಗೊಳಗಾದೆ ಯಾಕೆಂದರೆ ಅಲ್ಲಿ ಪಿಚ್ಚರ್‌ನ ಹಾಡುಗಳನ್ನು ಹಾಕಿ ಕುಣಿತ (Dance) ಇತ್ತು. ಕುಡಿಯುವವರಿಗೆ ವಿಸ್ಕಿ, ರಮ್, ಬಿಯರ್ ಇತ್ತು. ಬಹಳ ದು:ಖದಿಂದ ಅಲ್ಲಿಂದ ಹೊರಬರಬೇಕಾಯಿತು).
20. ಅದೃಷ್ಟ ಕಲ್ಲುಗಳನ್ನು ಇಟ್ಟುಕೊಳ್ಳುವಂತದ್ದು.
21. ಲೈಂಗಿಕತೆಗೆ ಪ್ರಚೋದನೆ ಕೊಡುವಂತಹ ಸಿ.ಡಿ. ಕ್ಯಾಸೆಟ್‌ಗಳನ್ನು ನೋಡುವಂತದ್ದು ಹಾಗೂ ಲೈಂಗಿಕತೆಗೆ ಪ್ರಚೋದನೆ ಕೊಡುವ ಪುಸ್ತಕಗಳನ್ನು ಓದುವಂತದ್ದು.
22. ಸಭೆಗಳಲ್ಲಿ ಅನೇಕ ಸಭಾಪಾಲಕರು ತಮ್ಮದೇ ಸಭೆಯಲ್ಲಿರುವ ಹುಡುಗಿಯರನ್ನು ಪ್ರೀತಿಸಿ ಮದುವೆಯಾಗುವದು (ತಂದೆ ಮಕ್ಕಳ ಸಂಬಂಧ ಎಲ್ಲಿದೆ?)
23. ಗಲ್ಫ್ ರಾಷ್ಟ್ರಗಳಲ್ಲಿ ಬಲವುಳ್ಳ ಕ್ರೈಸ್ತ ವಿಶ್ವಾಸಿಗಳು ಆದರೆ ಸ್ವಂತ ಊರಿಗೆ ಬರುವಾಗ ವಿಶ್ವಾಸವಿಲ್ಲ. ಅದೇ ಸಂಪ್ರದಾಯ, ಆರಾಧನೆಗಳು, ಅದೇ ಹಳೆಯ ಜೀವನ.
24. ಮನೆಯ ಒಳಗಡೆ ದೇವರೆಂಬ ವಿಗ್ರಹಗಳನ್ನು ಫೋಟೋಗಳನ್ನು ಇಟ್ಟುಕೊಳ್ಳುವಂತದ್ದು.
25. ಕುತ್ತಿಗೆಗೆ, ಸೊಂಟಕ್ಕೆ, ಕೈ ಕಾಲುಗಳಿಗೆ ರಕ್ಷಣೆಗಾಗಿ ಅನ್ಯರ ಹಾಗೆ ತಾಯತಗಳನ್ನು ಕಟ್ಟಿಕೊಳ್ಳುವಂತದ್ದು, ಮಕ್ಕಳಿಗೆ

ದೃಷ್ಟಿ ಬೀಳಬಾರದೆಂದು ಕಾಡಿಗೆ ಹಚ್ಚುವುದು, ಮೆಣಸು ತಿರುಗಿಸಿ ಬೆಂಕಿಗೆ ಹಾಕಿ ದೃಷ್ಟಿ ತೆಗೆಸುವುದು, ಎಲ್ಲಿಯಾದರೂ ಹೊರಡುವಾಗ ಎಲ್ಲಿಗೆ ಅಂತ ಯಾರಾದರೂ ಕೇಳಬಾರದು ಕೇಳಿದರೆ ಅಪಶಕುನ ಎಂಬ ನಂಬಿಕೆ, ಹೊಸ್ತಿಲಲ್ಲಿ ನಿಂತು ಉಗುರುಗಳನ್ನು ತೆಗೆಯಬಾರದು, ಮನೆಯ ಒಳಗಿಂದ ಹೊರಗಿರುವವರಿಗೆ ಹಣ ಕೊಡಬಾರದು, ಇನ್ನು ಅನೇಕ ವಿಧವಾದ ತಪ್ಪಾದ ಕಾರ್ಯಗಳನ್ನು ಅನುಸರಿಸುವಂತಹ ಕ್ರೈಸ್ತ ವಿಶ್ವಾಸಿಗಳನ್ನು ಲೋಕದಲ್ಲಿ ಕಾಣಬಹುದು.

**“ರಕ್ತಸಹಿತವಾದ ಮಾಂಸವನ್ನೂ ತಿನ್ನಬಾರದು. ಯಂತ್ರಮಂತ್ರಗಳನ್ನು ಮಾಡಬಾರದು, ಶಕುನಗಳನ್ನು ನೋಡಬಾರದು. ಚಂಡಿಕೆ ಬಿಡಬಾರದು, ಗಡ್ಡವನ್ನು ವಿಕಾರಗೊಳಿಸಬಾರದು. ಸತ್ತವರಿಗೋಸ್ಕರ ದು:ಖವನ್ನು ಸೂಚಿಸುವುದಕ್ಕಾಗಿ ದೇಹವನ್ನು ಗಾಯಮಾಡಿಕೊಳ್ಳಬಾರದು. ಶರೀರದ ಮೇಲೆ ಹಚ್ಚೇ ಚುಚ್ಚಿಸಿಕೊಳ್ಳಬಾರದು ನಾನು ಯೆಹೋವನು”** (ಯಾಜಕ. 19:26–28). **“ಸತ್ತವರಲ್ಲಿ ವಿಚಾರಿಸುವವರ ಮತ್ತು ಬೇತಾಳಿಕರ ಹತ್ತಿರ ಹೋಗಬಾರದು; ಅವರ ಆಲೋಚನೆಯನ್ನು ಕೇಳಿ ಅಶುದ್ಧರಾಗಬಾರದು. ನಾನು ನಿಮ್ಮ ದೇವರಾದ ಯೆಹೋವನು”** (ಯಾಜಕ. 19:31). **“ಯಾವನಾದರೂ ಸತ್ತವರಲ್ಲಿ ವಿಚಾರಿಸುವವರ ಅಥವಾ ಬೈತಾಳಿಕರ ಬಳಿಗೆ ಹೋಗಿ ಅವರ ಆಲೋಚನೆ ಕೇಳಿಕೊಂಡು ದೇವದ್ರೋಹಿಯಾದರೆ ನಾನು ಆ ಮನುಷ್ಯನಿಗೆ ವಿಮುಖನಾಗಿ ಅವನನ್ನು ಕುಲದಿಂದ ತೆಗೆದುಹಾಕುವೆನು. ನಾನು ನಿಮ್ಮ ದೇವರಾದ ಯೆಹೋವನಾಗಿರುವದರಿಂದ ನೀವು ನನ್ನವರಾಗಿ ಪರಿಶುದ್ಧರಾಗಿರಬೇಕು. ನನ್ನ ಆಜ್ಞೆಗ್ಗಳನ್ನು ಅನುಸರಿಸಿ ನಡೆಯಬೇಕು. ನಾನು ನಿಮ್ಮನ್ನು ಪರಿಶುದ್ಧಜನವಾಗುವಂತೆ ಮಾಡುವ ಯೆಹೋವನು”** (ಯಾಜಕ. 20:6–8). **“ಈ ನನ್ನ ಆಜ್ಞಾವಿದಿಗಳನ್ನೆಲ್ಲಾ ನೀವು ಅನುಸರಿಸಿ ನಡೆಯಬೇಕು; ಹಾಗೆ ನಡೆದರೆ ನಾನು ನಿಮ್ಮನ್ನು ಯಾವ ದೇಶಕ್ಕೆ ಬರಮಾಡಿ ಅದನ್ನು ನಿವಾಸಕ್ಕಾಗಿ ಕೊಡುತ್ತೇನೋ ಆ ದೇಶವು ನಿಮ್ಮನ್ನು ಕಾರಿಬಿಡುವದಿಲ್ಲ. ನಾನು ನಿಮ್ಮ ಎದುರಿನಿಂದ ಹೊರಡಿಸುವ ಜನಾಂಗದ ಆಚಾರಗಳನ್ನು ನೀವು ಅನುಸರಿಸಬಾರದು; ಅವರು ಈ ದುರಾಚಾರಗಳನ್ನೆಲ್ಲಾ ನಡಿಸಿದದರಿಂದ ನನಗೆ ಹೇಸಿಗೆಯಾದರು. ನಿಮಗಾದರೋ ನೀವು ಅವರ ದೇಶವನ್ನು ಸ್ವಾಧೀನಪಡಿಸಿಕೊಳ್ಳುವಿರಿ; ಹಾಲೂ ಜೇನೂ ಹರಿಯುವಂಥ ಆ ದೇಶವನ್ನು ನಿಮಗೆ ಸ್ವದೇಶವಾಗುವದಕ್ಕೆ ಕೊಡುವೆನು ಎಂದು ನಾನು ಮಾತುಕೊಟ್ಟೆನಲ್ಲವೇ. ನಾನು ನಿಮ್ಮನ್ನು ಇತರ ಜನಾಂಗಗಳಿಂದ ಪ್ರತ್ಯೇಕಿಸಿದ ನಿಮ್ಮ ದೇವರಾದ ಯೆಹೋವನು”** (ಯಾಜ. 20:22–24). **“ಸತ್ತವರಲ್ಲಿ ವಿಚಾರಿಸುವವರೂ ಬೈತಾಳಿಕರೂ ಸ್ತ್ರೀಯರಾಗಲಿ ಪುರುಷರಾಗಲಿ ಮರಣಶಿಕ್ಷೆ ಹೊಂದಬೇಕು. ಕಲ್ಲೆಸೆದು ಅವರನ್ನು ಕೊಲ್ಲಬೇಕು; ಆ ಶಿಕ್ಷೆಗೆ ಅವರೇ ಕಾರಣರು”** (ಯಾಜ. 20:27). **“ಯೆಹೋವನು ಮೋಶೆಗೆ ಹೇಳಿದ್ದೇನಂದರೆ ನೀನು ಇಸ್ರಾಯೇಲ್ಯರಿಗೆ ಹೀಗೆ ಆಜ್ಞಾಪಿಸಬೇಕು ನಾನು ನಿಮ್ಮ ದೇವರಾಗಿರುವ ಯೆಹೋವನು. ನೀವು ವಾಸವಾಗಿದ್ದ ಐಗುಪ್ತದೇಶದ ಆಚಾರಗಳನ್ನು ಅನುಸರಿಸಬಾರದು; (ಬಿಟ್ಟುಬಂದ ಹಿನ್ನಲೆ) ನಾನು ನಿಮ್ಮನ್ನು ಬರಮಾಡುವ ಕಾನಾನ್‌ದೇಶದ ಆಚರಣೆಗಳನ್ನೂ (ಲೋಕದ ಅನ್ಯರಲ್ಲಿರುವ) ನೀವು ಅನುಸರಿಸಬಾರದು; ಅವರಲ್ಲಿರುವ ನಿಯಮಗಳಿಗೆ ನೀವು ಒಳಗಾಗಬಾರದು. ಯೆಹೋವನೆಂಬ ನಾನೇ ನಿಮ್ಮ ದೇವರಾಗಿರುವದರಿಂದ ನನ್ನ ನಿರ್ಣಯಗಳ ಪ್ರಕಾರವೇ ನೀವು ನಡೆಯಬೇಕು, ನನ್ನ ವಿಧಿಗಳನ್ನು ಅನುಸರಿಸಬೇಕು”** (ಯಾಜಕ. 18:1–4). **“ಈ ದುರಾಚಾರಗಳಲ್ಲಿ ಯಾವದರಿಂದಲೂ ನೀವು ಅಶುದ್ಧರಾಗಬಾರದು. ನಾನು ನಿಮ್ಮ ಎದುರಿನಿಂದ ಹೊರಡಿಸುವ ಜನಾಂಗಗಳವರು ಇಂಥ ದುರಾಚಾರಗಳಿಂದ ಅಶುದ್ಧರಾದರು. ಅವರ ದೇಶವು ಅಶುದ್ಧವಾಗಿ ಹೋದದರಿಂದ ಅವರ ಪಾಪಕೃತ್ಯಗಳಿಗಾಗಿ ಅವರನ್ನು ಶಿಕ್ಷಿಸಿದ್ದೇನೆ; ಆ ದೇಶವು ತನ್ನಲ್ಲಿ ವಾಸಿಸಿದವರನ್ನು ಕಾರಿಬಿಟ್ಟಿತು. ಆದದರಿಂದ ಸ್ವದೇಶದವರಾದ ನಿಮ್ಮಲ್ಲಿಯೂ ನಿಮ್ಮ ನಡುವೆ ಇಳುಕೊಂಡಿರುವ ಅನ್ಯದೇಶದವರಲ್ಲಿಯೂ ಯಾರೂ ಈ ಹೇಸಿಗೆಯಾದ ಕಾರ್ಯಗಳಲ್ಲಿ ಒಂದನ್ನಾದರೂ ನಡಿಸದೆ ಎಲ್ಲರೂ ನನ್ನ ಆಜ್ಞಾವಿಧಿಗಳನ್ನು ಅನುಸರಿಸಿ ನಡೆಯಬೇಕು. ನಿಮಗಿಂತ ಮುಂಚೆ ಆ ದೇಶದಲ್ಲಿ ಇದ್ದವರು ಇಂಥ ಹೇಸಿಗೆಯಾದ ಕೆಲಸಗಳನ್ನು ಮಾಡಿದ್ದರಿಂದ ಆ ದೇಶವು ಅಶುದ್ಧವಾಗಿ ಹೋಯಿತಲ್ಲಾ. ಆ ದೇಶವು ನಿಮಗಿಂತ ಮುಂಚೆ ಇದ್ದ ಜನಾಂಗಗಳನ್ನು ಕಾರಿಬಿಟ್ಟ ಪ್ರಕಾರವೇ ನಿಮ್ಮಿಂದ ಅಶುದ್ಧವಾದರೆ ನಿಮ್ಮನ್ನೂ ಕಾರಿಬಿಟ್ಟೀತು. ಯಾವನಾದರೂ ಈ ಹೇಸಿಗೆಯಾದ ಕೆಲಸಗಳಲ್ಲಿ ಒಂದನ್ನಾದರೂ ಮಾಡಿದರೆ ಅವನು ಕುಲದಿಂದ ತೆಗೆದು ಹಾಕಲ್ಪಡಬೇಕು. ಆದದರಿಂದ ನಿಮಗಿಂತ ಮುಂಚೆ ನಡೆಯುತ್ತಿದ್ದ ಅಸಹ್ಯವಾದ ಆಚರಣೆಗಳನ್ನು ನಡಿಸಿ ನಿಮ್ಮನ್ನು ಅಶುದ್ಧಮಾಡಿಕೊಳ್ಳದೆ ನನ್ನ ವಿಧಿಗಳನ್ನೇ ಅನುಸರಿಸಿ ನಡೆಯಬೇಕು; ನಾನು ನಿಮ್ಮ ದೇವರಾದ ಯೆಹೋವನು”** (ಯಾಜಕ. 18:24–30).

ಮುಂದುವರಿಯುವುದು.....

ಕರ್ತನ ಸೇವೆಯಲ್ಲಿ ಪ್ರಯಾಸಪಡುತ್ತಿರುವ ಮತ್ತು
ನಿಮ್ಮೆಲ್ಲರ ಪ್ರೀತಿಗೆ ಪಾತ್ರಳಾದ ಕ್ರಿಸ್ತನ ದಾಸಿಯಾದ,

**– ಸಹೋ|| ಎಲಿಜಬೆತ್ ಸುನಿಲ್ ಡಿ'ಸೋಜಾ.**

**ನಾನು ಯೆಹೋವನಲ್ಲಿ ಉಲ್ಲಾಸಿಸುವೆನು. ನನ್ನ ರಕ್ಷಕನಾದ ದೇವರಲ್ಲಿ ಆನಂದಿಸುವೆನು**
**(ಹಬ. 3:18).**

# ಸ್ಥಳೀಯ ಮತ್ತು ವಿದೇಶ ಸುದ್ದಿ

* ಗ್ಯಾಸ್‌ಗೆ ಆಧಾರ್ ಬೇಕಿಲ್ಲ :– ಅಡುಗೆ ಅನಿಲ ಹಾಗೂ ಅದರ ಸಬ್ಸಿಡಿ ಪಡೆದುಕೊಳ್ಳಲು ಗ್ರಾಹಕರು ಕಳೆದ ಒಂಬತ್ತು ತಿಂಗಳಿಂದ ಎದುರಿಸುತ್ತಿದ್ದ ನಾನಾ ಸಮಸ್ಯೆಗಳಿಗೆ ಈ ವಾರಾಂತ್ಯದಲ್ಲಿ ಮುಕ್ತಿಸಿಗಲಿದೆ.
* ಚಿನ್ನದ ಮೇಲಿನ ಅಮದು ಸುಂಕ ಹೆಚ್ಚುತ್ತಿದ್ದಂತೆಯೇ ಚಿನ್ನದ ಕಳ್ಳಸಾಗಾಣೆಯೂ ಹೆಚ್ಚುತ್ತಿದೆ. ಈ ಹಿನ್ನಲೆಯಲ್ಲಿ ಚಿನ್ನ ಕಳ್ಳಸಾಗಣೆ ವಿರುದ್ಧ ಮತ್ತಷ್ಟು ಬಿಗಿ ನೀತಿಗಳನ್ನು ಅಳವಡಿಸಲು ಮುಂದಾದ ಕೇಂದ್ರ ಸರ್ಕಾರ, ವಿದೇಶದಿಂದ ಚಿನ್ನ ಖರೀದಿಸಿ ತರುವ ಪ್ರಯಾಣಿಕರಿಗೆ, ಖರೀದಿಯ ದುಡ್ಡಿನ ಮೂಲವನ್ನು ಪ್ರಶ್ನಿಸಲಿದೆ.
* ಚುನಾವಣಾ ನೀತಿ ಸಂಹಿತೆ ನೆಪವೊಡ್ಡಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ ಮರಳಿ ಶಾಲೆಗೆ ದಾಖಲಿಸುವ ಪ್ರಕ್ರಿಯೆ ಸ್ಥಗಿತಗೊಳಿಸದಂತೆ ಸರ್ಕಾರಕ್ಕೆ ಹೈಕೋರ್ಟ್ ಮೌಖಿಕವಾಗಿ ನಿರ್ದೇಶ ನೀಡಿದೆ.
* ಜಗತ್ತಿನ ಬದುಕಿರುವ ಅತ್ಯಂತ ಹಿರಿಯ ಮಹಿಳೆ ಎಂಬುದಾಗಿ ಗಿನ್ನೆಸ್ ಪುಸಕ್ತದಲ್ಲಿ ದಾಖಲಾಗಿರುವ ಜಪಾನ್‌ನ ಮಿಸಾವೊ ಒಕಾವ ಪಶ್ಚಿಮ ಜಪಾನ್‌ನ ಒಸಾಕದಲ್ಲಿ ತನ್ನ 116ನೇ ಹುಟ್ಟಿನ ದಿನವನ್ನು ಆಚರಿಸಿಕೊಂಡರು.
* ರಾಜ್ಯದಲ್ಲಿ ಮಕ್ಕಳನ್ನು ಬಾಲಕಾರ್ಮಿಕರಾಗಿ ಬಳಸಿಕೊಂಡಿರುವ ಎಷ್ಟು ಜನ ಆರೋಪಿಗಳನ್ನು ಇಲ್ಲಿಯವರೆಗೂ ಬಂಧಿಸಲಾಗಿದೆ. ಎಷ್ಟು ರೂ.ಗಳ ದಂಡ ಸಂಗ್ರಹಿಸಲಾಗಿದೆ ಹಾಗೂ ಎಷ್ಟು ಮಕ್ಕಳನ್ನು ರಕ್ಷಣೆ ಮಾಡಲಾಗಿದೆ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವಂತೆ ಸರಕಾರಕ್ಕೆ ಹೈಕೋರ್ಟ್ ಸೂಚಿಸಿದೆ.
* ಬಾಂಗ್ಲಾದೇಶದಲ್ಲಿ ಅಂತ್ಯಗೊಂಡ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿ ತಾಯ್ನಾಡಿಗೆ ಹಿಂದಿರುಗಿದ ಶ್ರೀಲಂಕಾ ತಂಡಕ್ಕೆ ಲಂಕಾ ಕ್ರಿಕೆಟ್ ಸಂಸ್ಥೆ ಅದ್ಧೂರಿಯ ಸ್ವಾಗತ ನೀಡಿದೆ.
* ನಿಗೂಢವಾಗಿ ಕಣ್ಮರೆಯಾಗಿರುವ ಮಲೇಷ್ಯಾ ಏರ್‌ಲೈನ್ ವಿಮಾನ ಪತ್ತೆಗೆ ಅಮೆರಿಕವೂ ಸೇರಿದಂತೆ ಹಲವು ದೇಶಗಳು ಶೋಧ ಕಾರ್ಯಾಚರಣೆಗೆ ಇಳಿದಿವೆ. ದಕ್ಷಿಣ ವಿಯೆಟ್ನಾಂನ ಕಡಲ ತೀರದ ಬಳಿ ಹಳದಿ ತುಣುಕುಗಳು ತೇಲುತ್ತಿದ್ದದ್ದು ಕಂಡುಬಂದಿದ್ದು, ಅವು ಈ ವಿಮಾನದ ಅವಶೇಷಗಳಿರಬಹುದೇ ಎಂಬ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಆದರೆ ಈವರೆಗೆ ಖಚಿತ ಮಾಹಿತಿ ದೊರೆತಿಲ್ಲ.

## ಡಿಜಿಎಮ್ ಬೇತೇಲ್ ಅಂಕಣ

- ನೀಲಮಣಿಯವರು ವಿಶ್ವಾಸದಮನೆ ಅನಾಥಾಶ್ರಮದಲ್ಲಿ 6 ವರ್ಷಗಳವರೆಗೆ ಆರೈಕೆ ಹಾಗೂ ವೈದ್ಯಕೀಯ ಶುಶ್ರೂಷೆಯನ್ನು ಹೊಂದಿ ಸಂಪೂರ್ಣ ಗುಣಮುಖರಾಗಿ, ನಮ್ಮ ಪುನರ್‌ವಸತಿ ಕೇಂದ್ರದಲ್ಲಿ ವೈಲ್ಡಿಂಗ್, ಮೆಸ್ತ್ರೀ ಕೆಲಸ, ತೋಟಗಾರಿಕೆ ಕೆಲಸದಲ್ಲಿ ತರಬೇತಿಯನ್ನು ಪಡೆದುಕೊಂಡು ಮರಳಿ ಕುಟುಂಬಕ್ಕೆ ತೆರಳಿದ್ದಾರೆ.
- ವಿಶ್ವಾಸದಮನೆ ಅನಾಥಾಶ್ರಮದಲ್ಲಿ 14 ವರ್ಷದಿಂದ ವೈದ್ಯಕೀಯ ಶುಶ್ರೂಷೆ ಹಾಗೂ ಆರೈಕೆಯನ್ನು ಹೊಂದಿ ಗುಣಮುಖರಾದ ಆನಂದ್ ಕುಮಾರ್ ಪಾಂಡೇರವರು ತಮ್ಮ ಕುಟುಂಬಕ್ಕೆ ಮರಳಿದ್ದಾರೆ.
- ವಿಶ್ವಾಸದಮನೆ ಅನಾಥಾಶ್ರಮದಲ್ಲಿ 9 ವರ್ಷದಿಂದ ವೈದ್ಯಕೀಯ ಶುಶ್ರೂಷೆ ಹಾಗೂ ಆರೈಕೆಯನ್ನು ಹೊಂದಿ ಸಂಪೂರ್ಣ ಗುಣಮುಖರಾಗಿ, ನಮ್ಮ ಪುನರ್‌ವಸತಿ ಕೇಂದ್ರದಲ್ಲಿ ವೈಲ್ಡಿಂಗ್, ಗಾರೆ ಕೆಲಸ, ಕೆಂಪು ಕಲ್ಲುಕೆತ್ತುವ ಕೆಲಸಗಳಲ್ಲಿ ಸುಶಾಂತ್ ಮಿಶ್ರಾರವರು ತರಬೇತಿ ಹೊಂದಿ ಮರಳಿ ಕುಟುಂಬಕ್ಕೆ ತೆರಳಿದ್ದಾರೆ.
- ಡಿಜಿಎಮ್ ಬೇತೇಲ್ ಚರ್ಚ್‌ನಲ್ಲಿ ನಡೆದ 3ನೇ ಕೆರೀತ್ ಬಿಡುಗಡೆ, ಉಜ್ಜೀವನ ಹಾಗೂ ಶಕ್ತಿಯ ಕೂಟವು ದೇವರ ಕೃಪೆಯಿಂದ ಒಳ್ಳೇ ರೀತಿಯಲ್ಲಿ ನಡೆಸಲ್ಪಟ್ಟಿತು. ಈ ಕೂಟದಲ್ಲಿ ಅನೇಕ ಜನರು ಭಾಗವಹಿಸಿ ದೇವರಿಂದ ಬಿಡುಗಡೆಯನ್ನು, ಸ್ವಸ್ಥತೆಯನ್ನು, ರಕ್ಷಣೆಯನ್ನು ಹೊಂದಿಕೊಂಡಿದ್ದಾರೆ.

ಯೆಹೋವನ ನಾಮವು ಮೂಡಣಿಂದ ಪಡುವಣದವರೆಗೂ ಸ್ತುತಿ ಹೊಂದಲಿ

(ಕೀರ್ತ. 113:3).

## ಜಾಹಿರಾತು


# ಬೇಕಾಗಿದ್ದಾರೆ

ಕ್ರೈಸ್ತ ಸಂಸ್ಥೆಗೆ ಅನುಭವವಿರುವಂತಹ ವಾಚಮೆನ್(ಕಾವಲುದಾರರು) ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 9964070654, 0820–2002781.**

# ಬೇಕಾಗಿದ್ದಾರೆ

ಗಂಡು ಮಕ್ಕಳ ವಸತಿ ನಿಲಯಕ್ಕೆ ಅನುಭವವಿರುವ ವಾರ್ಡನ್ ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 9964070654, 0820–2002781.**

**ನಿಮಗೆ ದೇವರ ವಾಕ್ಯದ ಟಿ–ಶರ್ಟ್ ಬೇಕಾದಲ್ಲಿ ನಾವು ಮಾಡಿಕೊಡುತ್ತೇವೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ :

**9902334941, 08202002781, 9844265602.**


ನೀತಿವಂತರ ಮಾರ್ಗವು ಮಧ್ಯಾಹ್ನದವರೆಗೂ ಹೆಚ್ಚುತ್ತಾ ಬರುವ ಬೆಳಗಿನ ಬೆಳಕಿನಂತಿದೆ (ಜ್ಞಾನೋ. 5:18).

ಮಕ್ಕಳ ಸ್ವರ

**ಆದಿಕಾಂಡ ಪುಸ್ತಕದಿಂದ ಆಯ್ದುಕೊಂಡ ಪದಗಳು :**

1) 'ದಾನ್' ಹೆಸರಿನ ಅರ್ಥ ಏನು?
2) 'ನಫ್ತಾಲಿ' ಎಂಬ ಹೆಸರಿನ ಅರ್ಥ ಏನು?
3) 'ಗಾದ್' ಹೆಸರಿನ ಅರ್ಥವೇನು?
4) 'ಅಶೇರ್' ಹೆಸರಿನ ಅರ್ಥವೇನು?
5) 'ಇಸ್ಸಾಕಾರ್' ಹೆಸರಿನ ಅರ್ಥವೇನು?
6) 'ಜೆಬುಲೂನ್' ಹೆಸರಿನ ಅರ್ಥವೇನು?
7) 'ಯೋಸೇಫ' ಹೆಸರಿನ ಅರ್ಥವೇನು?
8) 'ಯಗರಸಾಹದೂತ–ಗಲೇದ್'ಎಂಬ ಪದಗಳ ಅರ್ಥವೇನು?
9) 'ಮಿಚ್ಪಾ' ಎಂಬ ಪದದ ಅರ್ಥವೇನು?
10) 'ಮಹನಯಿಮ್' ಎಂಬ ಸ್ಥಳದ ಅರ್ಥವೇನು?

---

**ಮಾರ್ಚ್ ತಿಂಗಳ ಮಕ್ಕಳ ಸ್ವರ ಸಂಚಿಕೆಯ ಉತ್ತರಗಳು :**

1) ದ್ವೇಷ (ಆದಿ. 26:21).
2) ವಿಶಾಲಸ್ಥಳ (ಆದಿ. 26:22).
3) ವಂಚಕ/ಮೋಸಗಾರ (ಆದಿ. 27:26).
4) ದೇವರ ಮನೆ (ಆದಿ. 28:19).
5) ವ್ಯಥೆ ನೋಡಿದನು (ಆದಿ. 29:32)
6) ದೇವರು ಕೇಳಿ ತಿಳುಕೊಂಡನು (ಆದಿ. 29:33).
7) ಒಂದಾಗುವೆವು (ಆದಿ. 29:34).
8) ಸ್ತೋತ್ರ (ಆದಿ. 29:35).
9) ಜಿಲ್ಪಳು (ಆದಿ. 30:9).
10. ಬಿಲ್ಹಳು (ಆದಿ. 30:3).

---

**: ಜೋಕ್ಸ್ :**

**ತೊಂದರೆ ಯಾರಿಗೆ?**

ವೈದ್ಯ : ನಿಮ್ಮ ಕಣ್ಣಿಗೆ ಅಂತಹ ಗಂಭೀರ ತೊಂದರೆ ಏನಿಲ್ಲ. ಕನ್ನಡಕ ಹಾಕಿಕೊಂಡರೆ ಸಾಕು.

ರೋಗಿ : ಸರಿ ಡಾಕ್ಟರೇ ಕನ್ನಡಕಕ್ಕೆ ಬರೆದುಕೊಡಿ.

ಡಾಕ್ಟರ್ : ಎಲ್ಲ ಸರಿ....... ಅದಕ್ಕೆ ಇಬ್ಬಿಬ್ಬರು ಯಾಕೆ ಬಂದಿದ್ದೀರಾ?

ಒಬ್ಬನೇ ಬಂದಿದ್ದ ರೋಗಿ ತಬ್ಬಿಬ್ಬು! ಕಣ್ಣೀನ ತೊಂದರೆ ಯಾರಿಗೆ?

**ಬೇಯಿಸಿದ ಮೊಟ್ಟೆ**

ಹೊಸದಾಗಿ ಮದುವೆಯಾದ ದಂಪತಿಗಳು ಅಡುಗೆ ಮನೆಯಲ್ಲಿ ಮಾತನಾಡುತ್ತಿದ್ದರು.

ಆಗ ಗಂಡ, "ಬಿಸಿನೀರಿನಲ್ಲಿ ಹೇಂಟೆಯನ್ನು ಏಕೆ ಮುಳುಗಿಸಿದ್ದಿಯೇ?" ಎಂದು ಕೇಳಿದ.

ಅದಕ್ಕೆ ಹೆಂಡತಿ, "ಅದು ಮೊಟ್ಟೆ ಕೊಡುವ ಹೊತ್ತು, ನೇರವಾಗಿ ಬೇಯಿಸಿದ ಮೊಟ್ಟೆಯನ್ನೇ ಕೊಡಲಿ ಅಂತ ಕಣ್ರೀ....." ಎಂದು ಹೇಳಿದಳು.

**ನಿನ್ನ ಜೀವವನ್ನು ನಾಶದಿಂದ ತಪ್ಪಿಸುವವನೂ, ಪ್ರೀತಿಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನೂ ಆಗಿದ್ದಾನೆ (ಕೀರ್ತ. 103:4).**